# ಮಾನಸ ಗಂಗೋತ್ರಿ

## ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ

ಸಂಚಿಕೆ – 18 ಸಂಪುಟ – 50 ದಿನಾಂಕ: 30.05.2018 ಪುಟ–1


## ಮಧ್ಯರಾತ್ರಿಯಲ್ಲಿ ಬಾಬ ಸಾಹೇಬರ ಜನ್ಮದಿನದ



ಡಾ. ಅಂಬೇಡ್ಕರ್‌ರವರ 127 ನೇ ಜನ್ಮದಿನಾಚರಣೆ ಅಂಗವಾಗಿ ಮಾನಸ ಗಂಗೋತ್ರಿಯ ಗ್ರಂಥಾಲಯದ ಮುಂಭಾಗದಲ್ಲಿರುವ ಅಂಬೇಡ್ಕರ್‌ರವರ ಪ್ರತಿಮೆಗೆ ಪ್ರೊ.ದಯಾನಂದ ಮಾನೆಯವರು ಪುಷ್ಪಾರ್ಚನೆಯನ್ನು ಮಾಡಿ ನಮನ ಸಲ್ಲಿಸಿದರು ಹಾಗು ವಿ.ವಿಯ ಕುಲಪತಿಗಳಾದ ಪ್ರೊ. ಬಸವರಾಜುರವರು ಮಧ್ಯರಾತ್ರಿ 12 ಗಂಟೆಗೆ ಕೇಕ್ ಕತ್ತರಿಸುವ ಮೂಲಕ ಜಯಂತಿ ಕಾರ್ಯಕ್ರಮಕ್ಕೆ ಮೆರಗು ತಂದರು.

ಮೈಸೂರು ವಿ.ವಿ ಯ ಸಂಶೋಧಕ ಸಂಘ ಮತ್ತು ಹಿರಿಯ ವಿದ್ಯಾರ್ಥಿಗಳ ಒಕ್ಕೂಟ ಸಂಘದ ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕುಲಪತಿಗಳು ಅಂಬೇಡ್ಕರ್‌ರವರು ಕೊಟ್ಟಂತಹ ಸಂವಿಧಾನದ ಹಕ್ಕುಗಳ ರಕ್ಷಣೆಯ ಜವಾಬ್ದಾರಿ ನಮ್ಮದಾಗಿದೆ. ನಾವು ಮಧ್ಯರಾತ್ರಿಯಲ್ಲಿ ಜಯಂತಿಯನ್ನು ಆಚರಿಸುವ ಮೂಲಕ ನಾವು ನಿದ್ರಿಸುತ್ತಿಲ್ಲ. ಎಚ್ಚರಿಕೆಯಿಂದಿದ್ದೇವೆ, ಜಾಗೃತರಾಗಿದ್ದೇವೆ ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸುತ್ತಿದ್ದೇವೆ. ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಸಂವಿಧಾನದಲ್ಲಿರುವ ಎಸ್.ಟಿ, ಎಸ್.ಸಿ ಕಾಯ್ದೆಯನ್ನು ಸುಪ್ರೀಮ್ ಕೋರ್ಟ್ ದುರ್ಬಲಗೊಳಿಸಲು ಹೊರಟಿರುವುದಕ್ಕೆ ನಾವು ಖಂಡಿಸಬೇಕು. ಹೆಚ್ಚಿನ ಜ್ಞಾನಾರ್ಜನೆಯನ್ನು ಪಡೆದು ನಮ್ಮ ಕುಟುಂಬ, ನಮ್ಮ ಸಮುದಾಯವನ್ನು ಬೆಳೆಸುವ ನಟ್ಟಿನಲ್ಲಿ ನಾವು ಸಾಗಬೇಕು. ಅಂಬೇಡ್ಕರ್‌ರವರು ಹೇಳಿರುವಂತೆ ಶಿಕ್ಷಣ ಎಂಬುದು ಹುಲಿಯ ಹಾಲಿನಂತೆ ಅದನ್ನು ಕುಡಿದವ ಘರ್ಜಿಸಲೇ ಬೇಕು ಎಂದು ಹೇಳುತ್ತಾ, ನಾವುಮಾತ್ರ ಕಾರ್ಯಕ್ಕೆ ಜಯಂತಿಯನ್ನು ಆಚರಿಸುವುದಲ್ಲ, ಅವರ ಮಾರ್ಗವನ್ನು ಅನುಸರಿಸುತ್ತಾ ಅವರ ಹೋರಾಟವನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಸಾರ್ವಜನಿಕ ಆಡಳಿತದ ವಿಭಾಗದ ಮುಖ್ಯಸ್ಥರಾದ ಪ್ರೋ. ದಯಾನಂದ ಮಾನೆಯವರು ಮಾತನಾಡಿ ಅಂಬೇಡ್ಕರ್ ನಮ್ಮ ಆಸ್ತಿಯಾಗಿದ್ದಾರೆ. ಅವರು ಹೋರಾಟದ ಹಂತದಲ್ಲಿ ಕಷ್ಟಗಳನ್ನೇ ಮೆಟ್ಟಿನಿಂತರು, ನಾನು ನನ್ನ ಸಮಾಜವನ್ನು ಬಹಳಷ್ಟು ಪ್ರೀತಿಸುತ್ತೇನೆ, ಆದರೆ ಅವರು ಅರಿವೆ ಇಲ್ಲದ ರೀತಿ ವರ್ತಿಸುತ್ತಿದ್ದಾರೆ ಎಂಬುದು ಅಂಬೇಡ್ಕರ್‌ರವರ ಕೊನೆಯ ಮಾತಾಗಿತ್ತು. ನಾವು ಬಾಬಾಸಾಹೇಬರ ಅನುಯಾಯಿಗಳು ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಅಂಬೇಡ್ಕರ್‌ರವರ ಹಾಡು ಮತ್ತು ಪುತ್ಥಳಿಯ ಸುತ್ತ ಕೇಳಿಬರುತ್ತಿದ್ದ ಜೈಕಾರಗಳು ಕಾರ್ಯಕ್ರಮಕ್ಕೆ ಕಳೆ ತಂದಿತ್ತು. ವಿ.ವಿಯ ಪರೀಕ್ಷಾಂಗ ಕುಲಸಚಿವರಾದ ಪ್ರೊ.ಸೋಮಶೇಖರ್‌ರವರು, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾದ ಪವನ್‌ಕುಮಾರ್‌ರವರು, ಸಂಶೋಧಕ ಸಂಘದ ಅಧ್ಯಕ್ಷರಾದ ಮಹದೇವ ಸ್ವಾಮಿ, ಮಹೇಶ್ ಸೋಸ್ಲೆ, ಬಹದ್ದೂರ್, ಅರುಣ್‌ಕುಮಾರ್, ಪ್ರಸಾದ್, ಮನು ಮಾವಿನಹಳ್ಳಿ ಹಾಗು ವಿವಿಯ ವಿದ್ಯಾರ್ಥಿಗಳು, ಸಂಶೋಧಕರು, ಮತ್ತು ಪ್ರಾಧ್ಯಾಪಕರು ಸಾಕ್ಷಿಯಾಗಿದ್ದರು.

## ಜನಾಂಗೀಯ ಸಂಸ್ಕೃತಿ ಅರಿಯಲು ಆಂಗ್ಲಭಾಷೆ ಅಗತ್ಯ: ನಾಗಮ್ಮ ಬೆಟ್ಟಸೂರು



ಮೈಸೂರು: ಯಾವುದೇ ಒಂದು ಜನಾಂಗೀಯ ಸಂಸ್ಕೃತಿಯನ್ನು ಅರಿಯಬೇಕಾದರೆ ಆಂಗ್ಲ ಭಾಷೆ ಅಗತ್ಯ ಎಂದು ಮೈಸೂರು ವಿವಿ ಹಂಗಾಮಿ ಕುಲಪತಿ **ನಾಗಮ್ಮ ಬೆಟ್ಟಸೂರು** ಅಭಿಪ್ರಾಯ ಪಟ್ಟರು.

ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಬಿ.ಎ. ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಪದವಿ ಇಂಗ್ಲೀಷ್ ಕೋರ್ಸ್‌ಗಳ ಪಠ್ಯಕ್ರಮ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಕರು ಕಡಿಮೆ ಆಸಕ್ತಿ ಹೊಂದಿದವರನ್ನು ಗುರುತಿಸಿ ಅವರನ್ನು ಬುದ್ಧಿವಂತರನ್ನಾಗಿ ಮಾಡುವಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಸಲಹೆ ನೀಡಿದರು.

ಪಠ್ಯಕ್ರಮ ರೂಪಿಸುವುದು ಜವಾಬ್ದಾರಿಯುತ ಕೆಲಸವಾಗಿದೆ ಆದ್ದರಿಂದ ಇಂದಿನ ಪಠ್ಯಕ್ರಮಗಳು ಕೇವಲ ಉದ್ಯೋಗ ಪಡೆಯುವುದಕ್ಕೆ ಮಾತ್ರ ಸೀಮಿತವಾಗದೇ ಸಮಾಜದಲ್ಲಿನ ಮಾನವೀಯ ಮೌಲ್ಯಗಳನ್ನು ತಿಳಿಸುವಂತಿರಬೇಕು. ಅಭಿವೃದ್ಧಿಯುತ ಸಮಾಜ ನಿರ್ಮಾಣ, ಸಮಾಜದಲ್ಲಿನ ಸಮಸ್ಯೆಗಳು ಆರ್ಥಿಕ, ಸಾಮಾಜಿಕ, ರಾಜಕೀಯ, ಉದ್ಯೋಗ ಕ್ಷೇತ್ರ, ಪರಿಸರ, ಸಾಂಸ್ಕೃತಿಕ ಹೀಗೆ ಎಲ್ಲಾ ವಿಷಯಗಳನ್ನು ಕುರಿತು ಪಠ್ಯಕ್ರಮ ರಚಿಸಬೇಕು ಎಂದು ತಿಳಿಸಿದರು.

ಇಂದು ಗ್ರಾಮೀಣ ಭಾಗದಿಂದ ಬರುವಂತಹ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯನ್ನು ಕಬ್ಬಿಣದ ಕಡಲೆಯಾಗಿ ಪರಿಗಣಿಸಿ ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ ಆದರೂ ಸಹ ಇಂದು ಇಂಗ್ಲೀಷ್ ಭಾಷೆಯನ್ನು ಬಹುತೇಕ ಕಲಿತಿರುವವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಆಗಿದ್ದಾರೆ ಎಂದು ಅವರು ನೂರರಲ್ಲಿ ಇಬ್ಬರು ಕೇವಲ ಭಾಷೆಯನ್ನು ಕಲಿತು ಅರ್ಥ ಮಾಡಿಕೊಳ್ಳುತ್ತಾರೆ ಆದರೆ ಭಾಷೆಯ ಮೂಲ ಸಂಸ್ಕೃತಿಯನ್ನು ತಿಳಿಯುವಲ್ಲಿ ವಿಫಲರಾಗುತ್ತಾರೆ ಅಂಥವರನ್ನು ಅಧ್ಯಾಪಕರು ಕಡೆಗಣಿಸಬೇಕು ಎಂದು ಎಚ್ಚರಿಸಿದರು.

ಇಂದು ವಿದ್ಯಾರ್ಥಿಗಳನ್ನು ವಿವೇಕಯುತರನ್ನಾಗಿ ಮಾಡುವಲ್ಲಿ ಅಧ್ಯಾಪಕರ ಪಾತ್ರ ಏನದೆ? ಎಂಬುದನ್ನು ಅರ್ಥೈಸಿಕೊಂಡು ಅವರಿಗೆ ಪ್ರಚಲಿತ ವಿದ್ಯಾಮಾನಗಳು ಹಾಗೂ ಮಾನವ ಸಂಬಂಧಿ ವಿಷಯಗಳನ್ನು ತಿಳಿಸುತ್ತ ಪ್ರಯತ್ನಿಸಬೇಕು ಎಂದು ತಿಳಿಸಿದರು. ಕಾಲೇಜು ಪ್ರಾಂಶುಪಾಲ ಪ್ರೊ.ಬಿ. ನಾಗರಾಜು ಮೂರ್ತಿ, ಆಡಳಿತಾಧಿಕಾರಿ ಪ್ರೊ.ಸಿ. ರಾಮಸ್ವಾಮಿ, ಪ್ರೊ. ಮಹಾದೇವ್, ಅಧ್ಯಾಪಕಿ ಪ್ರೊ. ಅನಿತಾ ವಿಮಲಾ ಬ್ರಾಗ್ಸ್, ಪ್ರೊ. ಗವೀನ್ ಜೂಡ್ ವಿಲ್ಸನ್ ಇದ್ದರು.

## ಕುಲಪತಿ ಆಗಲು ನೂರಾರು ಬಾರಿ ಹೇಳಿದ್ದೆ : ಡಾ. ಪದ್ಮಾ ಶೇಖರ್

### ಮಹಿಳೆಯರು ಸ್ಥಾನಮಾನ ಪಡೆಯುವಾಗ ಕಾಲು ಎಳೆಯುವವರೇ ಹೆಚ್ಚು ಉಷಾರಾಣಿ ವಿಷಾದ



ಮೈಸೂರು: ಇಂದು ಮಹಿಳೆಯರಿಗೆ ಉನ್ನತ ಸ್ಥಾನ ಉಳಿಸಿಕೊಳ್ಳುವುದು ಅತ್ಯಂತ ಸವಾಲಾದ ಕೆಲಸವಾಗಿದ್ದು ಉಷಾ ರಾಣಿ ಅವರಿಗೆ ಕುಲಪತಿ ಆಗಲು ಪ್ರಮುಖರನ್ನು ಭೇಟಿ ಮಾಡಬೇಕು ಎಂದು ನೂರಾರು ಬಾರಿ ಹೇಳಿದ್ದೆ. ಅವರಿಗೆ ಕೊಟ್ಟು ಗೊತ್ತೇ ಹೊರತು ಕೇಳಿ ಗೊತ್ತಿಲ್ಲ ಹಾಗಾಗಿ ಅವರು ಕುಲಪತಿ ಆಗಲು ಹಿಂದೇಟು ಹಾಕಿದರು ಎಂದು ಸಂಸ್ಕೃತ ವಿವಿಯ ಕುಲಪತಿ ಡಾ.ಪದ್ಮಾಶೇಖರ್ ತಿಳಿಸಿದರು.

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸೋಮವಾರ ಪ್ರೊ.ಎನ್.ಉಷಾರಾಣಿ ಗುರುನಮನ ಸಮಿತಿಯಿಂದ ಆಯೋಜಿಸಲಾದ ಪ್ರೊ.ಎನ್.ಉಷಾರಾಣಿ ಅಭಿನಂದನೆ ಹಾಗೂ ಮಾಧ್ಯಮ ಸಂಹಿತೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು ಗುರು–ಶಿಷ್ಯರ ನಡುವೆ ಬಾಂಧವ್ಯ ಕಡಿಮೆ ಆಗುತ್ತಿರುವ ಇಂದಿನ ಸಂದರ್ಭದಲ್ಲಿ ಉಷಾರಾಣಿ ಅವರಿಗೆ ಗುರುವಂದನೆಯ ಜೊತೆಗೆ ಮಾಧ್ಯಮ ಸಂಹಿತೆ ಕುರಿತು ಪುಸ್ತಕ ಹೊರತಂದಿರುವುದು ಸಂತಸದ ವಿಷಯವಾಗಿದೆ ಎಂದರು. ಉಷಾರಾಣಿ ಅವರು ಎವಿಆರ್‌ಸಿ ಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಮೇಲೆ ಅವ್ಯವಹಾರದ ಆರೋಪ ಬಂತು. ಇಂದಿನ ಕಾಲಘಟ್ಟದಲ್ಲಿ ಯಾವಾಗ ಆರೋಪ ಬರುತ್ತದೆ ಎಂದು ಗೊತ್ತಿಲ್ಲ. ಜೆರಾಕ್ಸ್ ಇಟ್ಟುಕೊಳ್ಳುವಂತೆ ಉಷಾರಾಣಿ ಅವರಿಗೆ ಸದಾ ಹೇಳುತ್ತಿದೆ. ನಾನು ಹೇಳಿದ್ದನ್ನು ಅನುಸರಿಸಿದ ಅವರು ಆರೋಪದಿಂದ ಹೊರಗೆ ಬಂದರು ಎಂದು ಅವರು ಹೇಳಿದರು. ಸಂವಹನತಜ್ಞ ಪ್ರೊ.ಎಚ್.ಎಸ್.ಈಶ್ವರ್ ಮಾತನಾಡಿ ಪ್ರೊ.ಎನ್. ಉಷಾರಾಣಿ ಅವರು ರಾಜಕೀಯದಿಂದ ದೂರ ಉಳಿದು ಪತ್ರಿಕೋದ್ಯಮ ವಿಭಾಗವನ್ನು ಬೆಳೆಸಲು ಶ್ರಮಿಸಿದರು. ವಿವಿಯಲ್ಲಿ ಕಿರುಕುಳ ಅನುಭವಿಸಿದರೂ ಅದನ್ನು ಮೆಟ್ಟಿ ನಿಂತರು ಎಂದರು. ಪ್ರೊ. ಎನ್. ಉಷಾರಾಣಿ ಮಾತನಾಡಿ, ವಿದ್ಯಾರ್ಥಿಗಳು, ಗುರುಗಳ ಸಮ್ಮುಖದಲ್ಲಿ ಅಭಿನಂದನೆ ಸ್ವೀಕಾರ ಮಾಡಿರುವುದು ಖುಷಿಯ ವಿಚಾರವಾಗಿದೆ. ನಾನು ಅಧ್ಯಾಪಕರಾಗಲು ಪ್ರೊ. ನಾಡಿಗ್ ಕೃಷ್ಣಮೂರ್ತಿ ಅವರು ಕಾರಣರಾಗಿದ್ದಾರೆ. ಮಹಿಳೆಯರು ಸ್ಥಾನಮಾನ ಪಡೆದಾಗ ಅವರ ಕಾಲು ಎಳೆಯುವವರೇ ಹೆಚ್ಚು. ಆದರೆ ನಾನು ಕಣ್ಣೀರು ಹಾಕಬಾರದು, ಪಲಾಯನ ಮಾಡಬಾರದು ಎಂದು ದಿಟ್ಟವಾಗಿ ಕಷ್ಟಗಳನ್ನು ಎದುರಿಸಿದೆ ಎಂದರು. ಸುಸಂಸ್ಕೃತ ವಿದ್ಯಾರ್ಥಿ ಸಮುದಾಯವನ್ನು ಹುಟ್ಟು ಹಾಕಿರುವುದು ಸಂತಸ ತಂದಿದೆ ಎಂದರು.

## ದೇವರು ಧರ್ಮಗಳ ನಡುವೆ ಮಾನವ



ಮೈಸೂರು : ಇಂದು ಮನುಷ್ಯ ದೇವರು ಧರ್ಮಗಳ ನಡುವೆ ಸಿಲುಕಿಕೊಂಡು ಮೂಢನಂಬಿಕೆಗೆ ತುತ್ತಾಗದೇ, ದೇವರ ಮೇಲೆ ನಂಬಿಕೆಯನನ್ನು ಸಹ ಹೊಂದಲಾರದ ದ್ವಿಗುಣ ಸ್ಥಿತಿಯನ್ನು ಎದುರಿಸುತ್ತಿದ್ದಾನೆ ಎಂದು ಪ್ರೊ.ಬಿ.ಪಿ.ಮಹೇಶ್‌ಚಂದ್ರಗುರು ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಅಂಬೇಡ್ಕರ್ ಸಂಶೋಧನಾ ಅಧ್ಯಯನ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ,ದೇವರ ಹೆಸರಿನಲ್ಲಿ ಸುಲಿಗೆ ಮಾಡುವವರು ಹೆಚ್ಚಾಗಿರುವುದರಿಂದ ಮನುಷ್ಯ ದ್ವಿಗುಣ ಸ್ಥಿತಿಯಲ್ಲಿದ್ದಾನೆ ಎಂದರು.

## ಕ್ರಿಯಾಶೀಲತೆಯೇ ಕಲಾವಿದನ ಶಕ್ತಿ

ಮೈಸೂರು : ಕಲೆ ಸರಸ್ವತಿಯ ಮತ್ತೊಂದು ಅವತಾರ ಆಕೆಯನ್ನು ಒಲಿಸಿಕೊಂಡರೆ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಬದುಕಬಹುದು ಎಂದು ಗಾಯಕ ಶಶಿಧರ ಕೋಟೆ ಅಭಿಪ್ರಾಯಪಟ್ಟರು. ಮಹಾರಾಜ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಿತಿ ವತಿಯಿಂದ ನಡೆದ ಪ್ರತಿಭಾನ್ವೇಷಣಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಕಲಾವಿದ ಅತ್ಯಂತ ಕ್ರಿಯಾಶೀಲನಾಗಿರಬೇಕು, ತನ್ನ ಕೆಲಸದಲ್ಲಿ ತೃಪ್ತಿ ಕಂಡುಕೊಳ್ಳುವನಾಗಿರಬೇಕು ಎಂದರು. ನಾವು ಜೀವನದಲ್ಲಿ ಉನ್ನತ ಮಟ್ಟಕ್ಕೆ ತಲುಪಬೇಕೆಂದರೆ ಮಾತೃ ಭಾಷೆಯ ಮೇಲೆ ಅಭಿಮಾನ ಹೊಂದಿರಬೇಕು, ತಾಯ್ನುಡಿ ನಮ್ಮ ಅಭಿವೃದ್ಧಿಗೆ ಪೂರಕ ಎಂದು ಹೇಳಿದರು.

## ಸುಭಾಷಿತ

**ಸೋಲು ಎಂಬುದು ಮತ್ತೊಮ್ಮೆ ಹೆಚ್ಚು ಚೈತನ್ಯದಿಂದ ನೀಡಲ್ಪಡುವ ಒಂದು ಅವಕಾಶ.**

# ಕಲಾಂ ಫೋಟೊದೊಂದಿಗೆ ಪುಟ್ಟಿ ಮತ್ತು......



ನಾವು ದಿನನಿತ್ಯ ಪ್ರಪಂಚದಲ್ಲಿ ಪುಟಾಣಿಗಳನ್ನು ನೋಡಿ ಸಂತೋಷ ಪಡುವವರನ್ನು ನೋಡಿದ್ದೇವೆ, ಕಂಡಿದ್ದೇವೆ ಆದರೆ ನಾವು ಇಷ್ಟಪಡಲು ಮುಖ್ಯವಾದ ಅಂಶವೆಂದರೆ ಆ ಮೊಗದಲ್ಲಿರುವ ಸುಂದರವಾದ ನಿಷ್ಕಲ್ಮಶವಾದ ಮುಗ್ದತೆ ಮಂದಹಾಸದಿಂದ ಕೂಡಿದ ನಗು...ಹೀಗೆ ಹತ್ತು ಹಲವು ಕಾರಣಗಳುಂಟು.ಕಲ್ಪತರು ನಾಡು ಎಂದು ಪ್ರಸಿದ್ದಿ ಪಡೆದ ತಿಪಟೂರಿನಲ್ಲಿ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಇತ್ತ ಕಾನ್ವೆಂಟ್ ಶಾಲೆ ಅತ್ತ ಪದವಿ ಶಿಕ್ಷಣ ಎರಡು ಒಟ್ಟೊಟ್ಟಿಗೆ'ಎರಡು ನದಿಗಳಂತೆ ಶಿಕ್ಷಣದ ಗಂಗೆಯನ್ನೆ ಹರಿಸುತ್ತಿದ್ದವು, ಜ್ಞಾನದ ದಾಹವನ್ನು ತೀರಿಸಿಕೊಳ್ಳಲು ಕರ್ನಾಟಕದ ಉತ್ತರ ಭಾಗದಿಂದ ಈ ಸಂಸ್ಥೆಗೊಬ್ಬ ಸೇರಿಕೊಂಡ. ಸಹಜವಾಗಿಯೆ ಅವನು ಮನೆಯ ಪ್ರೀತಿ ಪ್ರೇಮ ವಾತ್ಸಲ್ಯಗಳನ್ನು ತೊರೆದು ಬಂದಿದ್ದರಿಂದ ಅವುಗಳಿಗಾಗಿಯೆ ಅವನ ಮನಸ್ಸು ಆತೊರೆಯುತಿತ್ತು, ಹೇಳಿ ಕೇಳಿ ಅವನು ಬಯಲುಸೀಮೆಯ ಹುಡುಗ ಅವರದ್ದು ಅವಿಭಕ್ತ ಕುಟುಂಬ ಮನೆತುಂಬ ಮಕ್ಕಳು ಆ ವಾತಾವರಣದಲ್ಲಿ ಬೆಳೆದಿದ್ದ ಅವನಿಗೆ ಇಲ್ಲಿ ಮತ್ತಿಕೆರೆ ಗ್ರಾಮದ 8 ವರ್ಷದ ಮುದ್ದಾದ ಪುಟಾಣಿ ಪಾಪು ಕವನ ಪರಿಚಯವಾಗಿದ್ದು ಅವನ ಎಲ್ಲಾ ಕವನಗಳಿಗೆ ಪುಟ್ಟ ಕಾವ್ಯವಾದಳು. ಹೇಳಿಕೇಳಿ ಮಕ್ಕಳ ಪ್ರಿಯ ಅದರಂತೆ ಅವನು ಆ ಕಾನ್ವೆಂಟ ಎಲ್ಲಾ ಮಕ್ಕಳಿಗೆ ಪ್ರಿಯವೆನಿಸಿದ್ದ. ಸಮಯ ಸಿಕ್ಕಾಗ ಆ ಮಕ್ಕಳಿಗೆ ಬೋಧನೆಯನ್ನು ಮಾಡುತ್ತಿದ್ದ. ಮಕ್ಕಳು ದೇವರ ರಾಜ್ಯದ ಪ್ರಜೆಗಳು ಎನ್ನುವ ಮಾತನ್ನು ಇಂತ ಪುಟಾಣಿಗಳನ್ನ ನೋಡಿ ನಮ್ಮ ಹಿರಿಕರು ಹೇಳಿರಬೇಕು. ಆ ಹುಡುಗಿಯಿಂದ ಪ್ರತಿದಿನ ಏನಾದರು ವಿಷಯವನ್ನು ತಿಳಿದು ಅದನ್ನ ಬರೆದಿಡುತ್ತಿದ್ದ. ಬರೆದಿಟ್ಟ ಆ ಲೇಖನಗಳಲ್ಲಿ ಇದುಒಂದು.

ಕವನ ನರಸಿಂಹನನ್ನು ಬಿಟ್ಟು ಊಟ ಮಾಡಿದ ದಿನವಿಲ್ಲ, ಒಂದು ದಿನ ನರಸಿಂಹನ ಕಣ್ಣು ಪಾಪುವಿನ ಒಂದು ನೋಟ್ ಪುಸ್ತಕದ ಮೇಲೆ ಬಿತ್ತು. ಆ ಪುಸ್ತಕದಲ್ಲಿ ಅದೇನೊ ಸ್ಫೂರ್ತಿಯ ಚೆಲುವೆ ಇದ್ದದುಂಟು ಎನ್ನುವುದು ಮಾತ್ರ ಸತ್ಯ. ಆದರೆ ಆ ಸ್ಪೂರ್ತಿಯ ಬೆಳಕು ಕಾಕಿ ಕವರಿನಿಂದ (ರ್‍ಯಾಪರ್) ಮುಚ್ಚಿಹೋಗಿತ್ತು. ಇದನ್ನ ಗಮನಿಸಿದ ನರಸಿಂಹ ಪುಸ್ತಕದ ಮಳಿಗೆಗೆ ಹೋಗಿ ವೈಟ್‌ರ್‍ಯಾಪರನ್ನು ತಂದನು.ಆ ರಾತ್ರಿಯಲ್ಲಿ ಕವನಳ ಪುಸ್ತಕದ ಕಾಕಿ ರ್‍ಯಾಪರನ್ನು ಕಿತ್ತೆಸೆದ, ಪುಸ್ತಕವನ್ನು ಸಂಪೂರ್ಣ ವೈಟ್‌ರ್‍ಯಾಪರ್ನಿಂದ ಬೈಂಡ್ ಮಾಡಿದನು. ಈಗವನಿಗೆ ನಿಟ್ಟುಸಿತು ಬಿಟ್ಟಾಂತಾಗಿ ಆ ಪುಸ್ತಕದರಟ್ಟಿನಲ್ಲಿದ್ದ ಆಸ್ಪೂರ್ತಿ ಪಾರದರ್ಶಕವಾಗಿ ಹೃದಯಕ್ಕೆ ಸೂರ್ತಿಯ ಕಿರಣಗಳು ಚೆಲ್ಲಿ ನೇರವಾಗಿ ಎದೆಯನ್ನ ನಾಟುತ್ತಿದ್ದವು

ಈ ಪದಗಳು ಯಾರಿಗೆ ತಾನೆ ಗೊತ್ತಿಲ್ಲ, ಎಲ್ಲರಿಗೂ ಜನ ಜನಿತವಾಗಿರುವ ಈ ಮಾತನ್ನ ಹೇಳಿದ್ದು. ಬೇರೆ ಯಾರುಅಲ್ಲ ನಮ್ಮ – ನಿಮ್ಮೆಲ್ಲರ ಮಕ್ಕಳ ಪ್ರಿಯ–ದೇಶವೇ ಸಲಾಂ ಮಾಡುವ ಕಲಾಂ ಜೀಯವರು ಹೇಳಿದ್ದು, ಈ ರೀತಿಯಾಗಿ ಕಲಾಂ ರವರ ಭಾವಚಿತ್ರನೊಳಗೊಂಡ ಆ ನಾಲ್ಕು ಸಾಲುಗಳಿಂದ ಅವನು ಅವಳ ಮನದಲ್ಲಿ ಅವರ ಬಗ್ಗೆ ಒಳ್ಳೆಯ ಭಾವನೆ ಮೂಡಲೆಂದು ಅವನು ಈ ರೀತಿ ಮಾಡಿದ್ದು ನಮ್ಮ ಗಮನಕ್ಕೆ ಬರಬೇಕಾದಂತ ವಿಷಯವಾಗಿದೆ.

ಅದರ ಮಾರನೆದಿನ ಸಹಜವಾಗಿಯೆ ಸರಿಯಾಗಿ ತರಗತಿಗೆ ಹೋಗಿದ್ದ ನರಸಿಂಹನು ಊಟದ ವಿರಾಮದ ವೇಳೆ ಕವನಾಳ ತರಗತಿಗೆ ಬಂದನು, ಆಗಾ ಪಾಪು ಕ್ಲಾಸ್ ವರ್ಕ್ಸ್ ಪುಸ್ತಕಗಳನ್ನು ಕಲೆಕ್ಷನ್ ಮಾಡಿಕೊಳ್ಳುತ್ತಿದ್ದಳು. ನರಸಿಂಹನು ಪ್ರತಿದಿನಾ ಅವಳಿಗೆ ಹಾಸ್ಯತರಲೆ ಮಾಡುತ್ತಿದ್ದ ಆದರೆ ಈ ದಿನ ಗಾಂಬೀರ್ಯದಿಂದ್ದ ಹೇಯ್ ಯಾರ 'ಇದನ್ನು ಹಾಕಿದ್ದು? ಎಂದು ನೆನ್ನೆ ಹಾಕಿದ್ದ ಬೈಂಡಿಂಗ್‌ಕಾಪಿಯನ್ನ ತೋರಿಸಿ ಕೇಳಿದ ಆದರೆ ಆ ಮಗು ಗಾಂಬೀರ್ಯತೆಯುನ್ನು ಮರುಕಳಿಸುವಂತೆ ತನ್ನ ಮುದ್ದಾದ ಮುಗ್ದ ಸ್ವರದಲ್ಲೆನೆ ಆ ಬೈಂಡಿಂಗ್‌ಅನ್ನು ಹಾಕಿದ್ದು ಎಂದು ಕರಾರುವಕ್ಕಾದ ಉತ್ತರವನ್ನೆ ನೀಡಿತು. ಅದಕ್ಕೆ ಇಲ್ಲ ಎಂಬಂತೆ ತಲೆಯಾಡಿಸಿದ ನರಸಿಂಹನು ಅದು ಯಾರು? ಎಂದು ಪ್ರಶ್ನಿಸಿದಾಗ ಆ ಪುಟಾಣಿಆ ಭಾವಚಿತ್ರದಲ್ಲಿರುವುದು ನೀನೆ ಆಗಾ ಮುಂದಕನಾಗಿದ್ದೆ ಆದರೆ ಈಗ ಯುವಕನಾಗಿದ್ದೀಯ ಅವನ ಗಂಭೀರತೆಯ ನಡುವೆಯೂ ಹಾಸ್ಯ ಚಟಾಕಿಯನ್ನು ಸಿಡಿಸಿತು.

## ವಾಚಕರ ಓಲೆ

# ಕ್ಯಾಂಪಸ್‌ನಲ್ಲಿ ಕೆಟ್ಟು ನಿಂತಿರುವ ಬೀದಿದೀಪಗಳು

ಮೈಸೂರು ವಿ.ವಿ ಎಂದಾಕ್ಷಣ ನೆನಪಾಗುವುದು ಮಾನಸಗಂಗೋತ್ರಿಯ ಕ್ಲಾಕ್ ಟವರ್, ಸೆನೆಟ್ ಭವನ, ಗ್ರಂಥಾಲಯ ಇವುಗಳು ನಮಗಲ್ಲದೆ ದೇಶ ವಿದೇಶ ವಿದ್ಯಾರ್ಥಿಗಳನ್ನು ಆಕರ್ಷಿಸುವ ಎಲ್ಲ ಗುಣಲಕ್ಷಣಗಳನ್ನು ಹೊತ್ತುನಿಂತಿದೆ. ಆದರೆ ರಾತ್ರಿಯ ವೇಳೆಯಲ್ಲಿ ಈ ಸ್ಥಳಗಳ ಮುಂಭಾಗ ರಸ್ತೆಬದಿಗಳಲ್ಲಿ ಬೀದಿ ದೀಪಗಳನ್ನೂ ಅಳವಡಿಸಲಾಗಿದ್ದು, ದುರಂತ ಇವು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿವೆ. ದೈತ ಸೋಲಾರ್ ದೀಪದ ಕಂಬಗಳು ಮಾತ್ರ ಬೆಳಕು ಬೆಳಗುತ್ತಿದ್ದು, ರಾತ್ರಿಯ ವೇಳೆಯಲ್ಲಿ ಜನರು ಹಾಗು ವಿದ್ಯಾರ್ಥಿಗಳು ಸಂಚರಿಸಲು ಸಾಧ್ಯವಾದಂತಹ ಕಗ್ಗತ್ತಲು ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಮುಂದೆ ಯಾವುದೇ ಅಹಿತಕರ ಘಟನೆ ಸಂಭವಿಸುವ ಮುಂಚೆ ಎಚ್ಚೆತ್ತುಕೊಂಡು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯು ಈ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯವಾಗಿದೆ.

**–ಕುಮಾರ್. ಹೆಚ್. ಪಿ**

# ಸಮಗ್ರ ಗಾಂಧಿ ಸಮಗ್ರ ಅಂಬೇಡ್ಕರ್

ಇಂದು ದಲಿತರು ಚಳವಳಿಗಳು ನಡೆಯುತ್ತಿರುವ ಮಾರ್ಗ ಯಾವುದು? ದಲಿತ ಚಳವಳಿ ಇಡುತ್ತಿರುವ ಹೊಸ ಹೆಜ್ಜೆಗಳು ಸ್ವಾಗತಾರ್ಹವಾದರೂ, ಎಷ್ಟು ಪ್ರಮಾಣದ ಯಶಸ್ಸನ್ನು ಗಳಿಸುತ್ತಿದೆ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅವರು ದಲಿತರಿಗೆ ಶಿಕ್ಷಣ, ಸಂಘಟನೆ ಹೋರಾಟಕ್ಕೆ ಕರೆಕೊಟ್ಟರು. ಇಂದು ದಲಿತರು ಈ ಮೂರನ್ನು ಪಾಲಿಸುತ್ತಾ ಇದ್ದರೂ ವ್ಯವಸ್ಥಿತವಾದ ಹೆಜ್ಜೆ ಇಡುತ್ತಿಲ್ಲ ಅನಿಸುತ್ತಿದೆ. ಸಂಘಟನೆಯ ಜತೆಗೆ ಸೈದ್ಧಾಂತಿಕ ವಿಘಟನೆಯೂ ಆಗುತ್ತಿದೆ ಎಂಬುದು ಹೊಸ ತಲೆಮಾರಿನ ದಲಿತ ಸಂಘಟಕರಿಗೆ ತಿಳಿಯುತ್ತಿಲ್ಲ. ಗಾಂಧಿ ಅಂಬೇಡ್ಕರ್ ನಡುವಿನ ಸೈದ್ಧಾಂತಿಕ ಹೋರಾಟವನ್ನು ಮುಂದಿಟ್ಟುಕೊಂಡು ಪದೇ ಪದೇ ಹಿರಿಯ ಚಳವಳಿಕಾರರನ್ನು ಅಣಕಿಸುವುದು, ನೀವೇನು ಮಾಡಿದಿರಿ ಎಂದು ವೇದಿಕೆಗಳಲ್ಲಿ ಪ್ರಶ್ನಿಸುವುದು, ಗಾಂಧಿಯನ್ನು ಅಂಬೇಡ್ಕರ್ ಅವರಿಗೆ ಸಮನಾಗಿ ಪರಿಗಣಿಸಿ ಅಂಬೇಡ್ಕರರಿಗೆ ದ್ರೋಹ ಬಗೆಯುತ್ತಿದ್ದೀರಿ ಎಂದು ಹಿರಿಯ ಚಳವಳಿಗಾರರನ್ನು ತೆಗಳುವುದು... ಇತ್ಯಾದಿ ವಾಗ್ಯುದ್ಧಗಳನ್ನು ನಾವು ಆಗಾಗ ಕಾಣುತ್ತಿದ್ದೇವೆ.

ಹೊಸ ಚಳವಳಿಯನ್ನು ರೂಪಿಸಬೇಕು ಎಂದು ರೂಪಿಸುವ ವೇದಿಕೆಗಳಲ್ಲಿ ಈ ವಾಗ್ಯುದ್ಧವೇ ಮೇಲಾಗಿ ವೇದಿಕೆಯ ಉದ್ದೇಶವನ್ನೇ ಮರೆತು, ಹಿರಿಯ ಚಳವಳಿಕಾರರನ್ನು ನಿಂದಿಸುವುದರಲ್ಲೇ ಕಾಲಹರಣ ಮಾಡುತ್ತಾ ದಾರಿ ತಪ್ಪುತ್ತಿದ್ದಾರೆ. ಸಂಘಟನೆ ಎಲ್ಲಿ ಆಗುತ್ತಿದೆ? ಗಾಂಧಿ ಟೀಕೆಯಷ್ಟೇ ಚಳವಳಿಯ ಉದ್ದೇಶವೇ? ಇದರೊಳಗೆಯೇ ಕಳೆದು ಹೋಗುತ್ತಿರುವ ದಲಿತ ಚಳವಳಿಯ ನಾಳೆಗಳು ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸರಿಯಾಗಿ ಗ್ರಹಿಸುತಿಲ್ಲ ಎನಿಸುತ್ತಿದೆ. ಇಂದಿನ ವಿದ್ಯಮಾನಗಳಿಗೆ ತೆರೆದುಕೊಂಡರೆ ಅಂಬೇಡ್ಕರ್ ಜತೆಗೆ ಗಾಂಧಿಯೂ ಪ್ರಸ್ತುತ ಎನಿಸದಿರದು. ಡಾ.ಶಿವಕುಮಾರ್, ರಘೋತ್ತಮ ಹೊ.ಬ. ಅವರಂತಹ ದಲಿತ ಯುವ ಬರಹಗಾರರು ಗಾಂಧಿ–ಅಂಬೇಡ್ಕರರ ನಡುವಿವ ಸೈದ್ಧಾಂತಿಕ ಹೋರಾಟದಲ್ಲಿ ದಲಿತರಿಗಾದ ಅನ್ಯಾಯವನ್ನು ತಿಳಿಸಿಕೊಡುತ್ತಾ ಗಾಂಧಿ ಇರದ ದಲಿತ ಚಳವಳಿಗೆ ಪೂರಕವಾಗಿ ಬರೆಯುತ್ತಿದ್ದಾರೆ. ದಲಿತ ಚಳವಳಿಯ ನಡೆ ಪ್ರಸ್ತುತ ವಿದ್ಯಮಾನಕ್ಕೆ ತೆರೆದುಕೊಳ್ಳುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಇಂದು ಎರಡು ವಿಧದ ಗಾಂಧಿ ನಮ್ಮೆದುರಿಗಿದ್ದಾರೆ. 1.ಅಂಬೇಡ್ಕರ್ ದೃಷ್ಟಿಯ ಗಾಂಧಿ 2.ಗೋಡ್ಸೆ ದೃಷ್ಟಿಯ ಗಾಂಧಿ

ಆಗಿರುವ ಗಾಯವನ್ನು ಮತ್ತೆಮತ್ತೆ ಕೆರೆದರೆ ಅಥವಾ ಕೆದಕಿದರೇ ಗಾಯವ್ರೂ ಮತ್ತೆ ಉಲ್ಬಣವಾಗುತ್ತಲೇ ಇರುತ್ತದೆ. ಅದರ ಬದಲು ಮುಲಾಮು ಹಚ್ಚಿದರೆ ಗಾಯವನ್ನೇ ವಾಸಿ ಮಾಡಬಹುದು. ಅಂಬೇಡ್ಕರ್ ದೃಷ್ಟಿಯ ಗಾಂಧಿ ನಿಜವಾಗಿಯೂ ದಲಿತರಿಗೆ ದ್ರೋಹ ಬಗೆದರು. ಜಾತಿಯ ಸಂಕೋಲೆಯಲ್ಲಿಯೇ ಅಸ್ಪೃಶ್ಯರು ಇರುವಂತೆ ಮಾಡಿದರು. ದಲಿತರಿಗೆ ಸಿಗಬೇಕಿದ್ದ ಪ್ರತ್ಯೇಕ ಮತದಾನದ ಹಕ್ಕನ್ನೇ ಕಿತ್ತುಕೊಂಡು ದಲಿತರು ರಾಜಕೀಯ ಶಕ್ತಿಗಳಾಗುವುದನ್ನು ತಪ್ಪಿಸಿ ಕಾಂಗ್ರೆಸ್ ಗುಲಾಮಗಿರಿಗೆ ಒಳಗಾಗುವಂತೆ ಮಾಡಿದರು. ಇದು ಗಾಂಧಿ ದಲಿತರಿಗೆ ಮಾಡಿರುವ ಗಾಯ. ಆದರೇ, ಅಂದು ಆಗಿರುವ ಗಾಯುವನ್ನು ಇಂದು ಕೂಡ ವಾಸಿಯಾಗಲು ಬಿಡುತ್ತಿಲ್ಲ.

ಇನ್ನು ಗೂಡ್ಸೆ ದೃಷ್ಟಿಯ ಗಾಂಧಿ. ಇಂದು ಭಾರತವನ್ನು ನಿಜವಾಗಿಯೂ ಕಾಡುತ್ತಿರುವುದು ಗೋಡ್ಸೆ ನೋಟದ ಗಾಂಧಿ. ಗಾಂಧಿಯನ್ನು ಗೋಡ್ಸೆ ದೃಷ್ಟಿಯಲ್ಲಿ ನೋಡುವವರನ್ನು, ನೀವು ಗಾಂಧಿಯನ್ನು ಏಕೆ ವಿರೋಧಿಸತ್ತೀರಿ ಎಂದು ಕೇಳಿದರೆ ಅವರು ಕೊಡುವ ಉತ್ತರ ನಮಗೆಲ್ಲ ಗೊತ್ತಿದೆ.

ಗಾಂಧಿ ಒಬ್ಬ ಮುಸ್ಲಿಂ ಪರವಾದಿ. ಆತ ಪಾಕಿಸ್ತಾನಕ್ಕೆ ಹೆಚ್ಚು ಪ್ರೀತಿ ತೋರಿದ. ಆತ ದೇಶಪ್ರೇಮಿಯಲ್ಲ. ಹಿಂದೂಗಳಿಗೆ ಆತ ವಿರುದ್ಧವಿದ್ದ. ಹೀಗಾಗಿ ಗೂಡ್ಸೆ ಕೊಂದು ಮಹಾನ್ ದೇಶಭಕ್ತನಾದ ಎನ್ನುತ್ತಾರೆ. ಗಾಂಧಿ ಹಿಂದೂ ಪರವಾದಿಯಾದರೂ ಆರ್.ಎಸ್.ಎಸ್ ಬಿತ್ತುವ ಹಿಂದುತ್ವವಾದಿಯಾಗಿರಲಿಲ್ಲ. ಇಂದು ಭಾರತ ಬಲ ಪಂಥೀಯರ ಹೊಂಚನೆಯ ಜಾಲಕ್ಕೆ, ಅವರು ಬಿತ್ತುತ್ತಿರುವ ಹುಸಿದೇಶಭಕ್ತಿ ಮತ್ತು ಹಿಂದೂರಾಷ್ಟ್ರ ಪರಿಕಲ್ಪನೆಯ ಜ್ವಾಲೆಗೆ ಬಲಿಯಾಗುತ್ತಿದೆ. ಒಂದಂತೂ ಸತ್ಯ; ಗಾಂಧಿ ನಿರ್ಲಕ್ಷ್ಯಕ್ಕೊಳಗಾಗುತ್ತಿದ್ದಾರೆ. ವಿದೇಶಗಳು ಭಾರತವನ್ನು ಗಾಂಧಿಯ ನೆಲೆಯಲ್ಲಿ ನೋಡುತ್ತವೆ. ಹೀಗಾಗಿಯೇ ಪ್ರಧಾನಿ ಮೋದಿಯವರು ಹೋದ ಬಂದ ಕಡೆಯೆಲ್ಲ ಗಾಂಧಿ ಜಪ ಮಾಡುತ್ತಾರೆ. ಯಾವ ಬಂಡವಾಡಶಾಹಿ ವ್ಯವಸ್ಥೆಯನ್ನು ಗಾಂಧಿ ವಿರೋಧಿಸಿದ್ದರೋ, ಅದೇ ಗಾಂಧಿ ಇಂದು ಮೋದಿವರಿಗೆ ಬಂಡಾವಾಳಶಾಹಿಗಳ ಮುಂದೆ ಮಾತನಾಡಲು ಬಳಕೆಯಾಗುತ್ತಿದ್ದಾರೆ. ಆರ್.ಎಸ್.ಎಸ್‌ನಲ್ಲಿರುವ ಯುವಕರು ನಮ್ಮ ಸುತ್ತ ಇದ್ದರೆ ಅವರನ್ನು, ಗಾಂಧಿ ಕಂಡರೆ ಕೆಂಡವಾಗುವ ನೀವು ಗಾಂಧಿ ಜಪ ಮಾಡುವ ಮೋದಿಯನ್ನು ಇಷ್ಟಪಡುತ್ತೀರ? ಎಂದು ಕೇಳಿ. ಅವರ ಉತ್ತರ ಮೌನವಾಗಬಹುದು. ದುರಂತವೆಂದರೆ ಗಾಂಧಿಯನ್ನು ಕೊಂದವರು ದೇಶಭಕ್ತಿಯ ಪಾಠವನ್ನು ನಮಗೆಲ್ಲಾ ಹೇಳಿಕೊಡುತ್ತಿದ್ದಾರೆ.

ಗಾಂಧಿ ಮೊದಲು ಹಿಂದೂ ಪರವಾದಿಯಾದರೂ ನಂತರದಲ್ಲಿ ಅಂಬೇಡ್ಕರರ ತೀಕ್ಷ್ಣ ವಿಮರ್ಶೆಯಿಂದ ದಲಿತ ಪರವಾಗುತ್ತಾ ಹೋದರು. ಹೀಗಾಗಿ ದಲಿತ ಹೋರಾಟ ಯಾರ ವಿರುದ್ಧ ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಲೋಹಿಯಾ, ಮಾರ್ಕ್ಸ್ ಕೂಡ ದಲಿತ ಚಳವಳಿಯಿಂದ ದೂರವಾಗುತ್ತಿದ್ದಾರೆ. ಅಂಬೇಡ್ಕರ್ ಮಹಾನ್ ದಲಿತ ಶಕ್ತಿಯಾದರೂ, ಉಳಿದ ನಾಯಕರ ಅನಿವಾರ್ಯತೆ ದಲಿತ ಚಳವಳಿಗಿದೆ. ಇಲ್ಲದಿದ್ದರೇ, ಅಂಬೇಡ್ಕರರನ್ನು ದಲಿತರಿಗಷ್ಟೇ ದಲಿತರೇ ಸೀಮಿತ ಮಾಡುವ ಅಪಾಯವಿದೆ.

ಹಿರಿಯ ಚಳವಳಿಕಾರರಿಗೆ ಸಿಕ್ಕಿರುವ ದಲಿತೇತತರ ಬೆಂಬಲ ಇಂದು ಯಾವ ಪ್ರಮಾಣದಲ್ಲಿ ಸಿಗುತ್ತಿದೆ ಎಂದು ಕೇಳಿಕೊಳ್ಳಿ. ಕರ್ನಾಟಕದಲ್ಲಿ ದಲಿತ ಚಳವಳಿಯ ದಿನಗಳಲ್ಲಿ ಅಂಬೇಡ್ಕರರನ್ನು ಎಲ್ಲರಿಗೂ ಮುಟ್ಟಿಸಲು ಮಾಡಿದ ಪ್ರಯತ್ನ ಸಾಕಷ್ಟು ಯಶಸ್ಸು ಗಳಿಸಿದೆ. ಏಕೆಂದರೆ ಹಿರಿಯ ಚಳವಳಿಕಾರರಿಗೆ ಹೇಗೆ ಅಂಬೇಡ್ಕರರನ್ನು ಎಲ್ಲರಿಗೂ ಮುಟ್ಟಿಸಬೇಕೆಂಬ ಪಟ್ಟುಗಳು ತಿಳಿದಿದ್ದವು. ಮೇಲ್ಜಾತಿಗಳಿಂದ ದೂರಾಗಿ ಚಳವಳಿಯ ರೂಪಿಸಲು ಆಗುವುದಿಲ್ಲ ಎಂದು ಅರಿತ್ತಿದ್ದರು. ಅವರೊಂದಿಗೆಯೇ ಇದ್ದು ವ್ಯವಸ್ಥೆಯ ದರ್ಶನ ಮಾಡಿಕೊಟ್ಟು ಚಳವಳಿಗೆ ಜನಮನ್ನಣೆ ತಂದು ಕೊಟ್ಟರು. ಪಿ.ಸಾಯಿನಾಥ್ ಅವರು ಹೇಳುವಂತೆ, ಈಗ ನಾವು ಬಹುದೂರ ಬಂದು ಜಾಗತೀಕರಣದೊಳಗೆ ಸಿಲುಕಿದ್ದು, ಧಾರ್ಮಿಕ ಮೂಲಭೂತವಾದ ಮತ್ತು ಬಂಡವಾಳಶಾಹಿ ಮೂಲಭೂತವಾದದ ಮೈತ್ರಿಕೂಟದ ಯುಗದಲ್ಲಿ ಬದುಕುತ್ತಿದ್ದೇವೆ. ಅವುಗಳ ಕಹಿಫಲವನ್ನು ಅನುಭವಿಸುತ್ತಾ ಇದ್ದೇವೆ. ವ್ಯವಸ್ಥೆ ಹೀಗಿರುವಾಗ ಇಂದು ಅಂಬೇಡ್ಕರ್ ಮತ್ತು ಗಾಂಧಿ ಜೀವಿಸುತ್ತಿದ್ದರೇ, ಇಬ್ಬರೂ ಸೈದ್ಧಾಂತಿಕ ತಡೆಗೋಡೆಗಳನ್ನು ಒಡೆದು ಒಂದಾಗುತ್ತಿದ್ದರು. ಏಕೆಂದರೆ ಭಾರತದ ಇಂದಿನ ಬೆಳವಣಿಗೆ ಮನುಷ್ಯ ವಿರೋಧಿಯಾಗುತ್ತಿದೆ.

# ಎತ್ತಿಗೆ ಜ್ವರ ಬಂದ್ರೆ, ಎಮ್ಮೆಗೆ ಬರೆ ಎಳೆದಂತೆ,

ಮೈಸೂರಿಗೆ ಶೈಕ್ಷಣಿಕ ಕಿರೀಟದಂತಿರುವ ಮಾನಸ ಗಂಗೋತ್ರಿ ವಿಶ್ವವಿದ್ಯಾಲಯವು ಹೆಚ್ಚು ಪ್ರಸಿದ್ಧಿಹೊಂದಿರುವ, ಆಕರ್ಷಣೆಯ.ವಿಶ್ವವಿದ್ಯಾಲಯವಾಗಿದೆ. ಅನೇಕ ಸಾಹಿತಿಗಳು, ಕವಿಗಳು, ಅಧಿಕಾರಿಗಳಿಗೆ ಜನ್ಮಸ್ಥಳವಾಗಿದೆ. ರಾಜ–ಮಹಾರಾಜರು ಓದಿದ ಪುಣ್ಯನೆಲೆಯಾಗಿದೆ. ಇಲ್ಲಿಗೆ ಹಲವಾರು ಗ್ರಾಮಗಳಿಂದ, ದೇಶ–ವಿದೇಶಗಳಿಂದ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯಲು ಬರುತ್ತಾರೆ. ಹಾಗಾಗಿ ಇದು, ಒಂದು ಬಗೆಯ ತೋಡದಲ್ಲಿ ಹಲವು ಬಗೆಯ ಹೂಗಳನ್ನು ಸೃಷ್ಟಿಸುವಂತಿದೆ. ಇಷ್ಟೆಲ್ಲ ಅನೇಕ ಕೀರ್ತಿಗೆ ಪಾತ್ರರಾಗಿರುವ ಈ ವಿಶ್ವವಿದ್ಯಾಲಯಕ್ಕೆ ಇತರ ಕಾಲೇಜು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಇತರ ಹೊರಗಿನ ಜನರು ಕ್ಯಾಂಪಸ್‌ನ ಒಳಗಡೆ ಬೈಕ್–ಕಾರ್‌ಗಳನ್ನು ಹೆಚ್ಚು ವೇಗವಾಗಿ ಓಡಿಸುವ ಮತ್ತು ಗುಂಪು–ಗುಂಪಾಗಿ ನಿಂತುಕೊಂಡು ಮಾತನಾಡುವ ಪರಿಣಾಮ, ಮಾನಸ ಗಂಗೋತ್ರಿಯಲ್ಲೇ ಓದುವ ವಿದ್ಯಾರ್ಥಿಗಳು, ಅಂದರೆ ಅಲ್ಲಿನ ಗೆಳೆಯ–ಗೆಳತಿಯರು ಒಂದು ಕಡೆ ಕುಳಿತು, ಮಾತನಾಡುವುದನ್ನು ಅಲ್ಲಿನ ಭದ್ರತಾ ಸಿಬ್ಬಂದಿಗಳು ಅನುಮಾನದಿಂದ ನೋಡುವುದು ಈ ಸ್ಥಳದಲ್ಲಿ ಕುಳಿತು ಕೊಳ್ಳಬಾರದೆಂದು ಪ್ರಶ್ನಿಸುವುದು ಎತ್ತಿಗೆ ಜ್ವರಬಂದ್ರೆ ಎಮ್ಮೆಗೆ ಬರೆ ಎಳೆದಂತೆ ವಿದ್ಯಾರ್ಥಿಗಳ ಮೇಲೆ ನೈತಿಕ ಗಿರಿಯನ್ನು ಎಸಗಿದಂತಾಗಿದೆ. ಚರ್ಚೆಗಳು ಮತ್ತು ಮಾತುಕಥೆಗಳನ್ನು ಕ್ಯಾಂಪಸ್ ಒಳಗಡೆ ಆಡುವುದಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಮಾಡಲಾಗುತ್ತದೆಯೇ? ವಿಶ್ವವಿದ್ಯಾನಿಲಯದ ಆಡಳಿತ ಸಿಬ್ಬಂದಿಗಳು ಇಂತಹ ಇಕ್ಕಟ್ಟಿನ ನಿಯಮಗಳನ್ನು ಸಡಿಲಗೊಳಿಸಿ ವಿದ್ಯಾರ್ಥಿಗಳನ್ನು ಮುಜುಗರತೆಯಿಂದ ದೂರಮಾಡಿ, ವಿಶ್ವವಿದ್ಯಾನಿಲಯಕ್ಕೆ ಧಕ್ಕೆ ಬಾರದಂತೆ ಗೌರವವನ್ನು ಕಾಪಾಡಬೇಕೆಂದು ಮನವಿ.

**–ಕಿರಣ್ ಕುಮಾರ್.ಆರ್**

# ಕಣ್ಣಿನ ಕ್ಯಾಮಾರದಲ್ಲಿ ಕ್ಲಿಕ್ಕಾದ ವಿ.ವಿ ಯ ಸಂಗ್ರಹಾಲಯ



ಮೈಸೂರಿನ ಮಾನಸಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆಯ ಬಗ್ಗೆ ಕೇಳಿ ತಿಳಿದಿದ್ದ ನನಗೆ, ಅರಮನೆಯ ಸೊಬಗನ್ನು ಕಣ್ಣಾರೆ ಸವಿಯುವ ಸಲುವಾಗಿ ನಾಲ್ವರು ಸ್ನೇಹಿತರು ಲಗ್ಗೆ ಇಟ್ಟೆವು. ಉಚಿತ ಪ್ರವೇಶದೊಂದಿಗೆ ಹೊರಟ ನಮಗೆ ಛಾಯಾಚಿತ್ರ ನಿಷೇದ ಎಂಬ ಫಲಕ ಆಹ್ವಾನ ನೀಡಿತು. ಅರಮನೆಯು ಕೇವಲ ರಾಜರ ಕಾಲದ ಅರಮನೆಯಾಗಿಯೇ ಉಳಿಯದೇ ಪ್ರಸ್ತುತ ವಿ.ವಿ ಯ ಒಂದು ಭಾಗವಾಗಿಯು ಮತ್ತು ವಸ್ತು ಸಂಗ್ರಹಾಲಯವಾಗಿಯು ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕದ ಪಾರಂಪರಿಕ ರಚನೆ ಎಂಬ ಬಿರುದಿಗೆ ಪಾತ್ರವಾಗಿರುವ ಈ ಅರಮನೆಯನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿ ಪ್ರಾಚ್ಯ ಶಿಲಾವಸ್ತು ಸಂಗ್ರಹಾಲಯ, ಪ್ರಾಚ್ಯ ಮರದ ವಸ್ತು ಸಂಗ್ರಹಾಲಯ, ಕುವೆಂಪು ಚಿತ್ರಶಾಲೆ ಮತ್ತು ಮುಖ್ಯವಾಗಿ ಜನಪದ ವಸ್ತುಸಂಗ್ರಹಾಲಯ ಎಂಬುದಾಗಿ ವಿಂಗಡಿಸಲಾಗಿದೆ.

**ಪ್ರಾಚ್ಯವಸ್ತು ಸಂಗ್ರಹಾಲಯ:** ಮೊದಲಿಗೆ ನಮ್ಮ ಕಣ್ಣಿಗೆ ಕಾಣಿಸಿದ್ದು ಪ್ರಾಚ್ಯವಸ್ತುಗಳು ಮತ್ತು ಶಿಲಾಶಾಸನಗಳು ಇಲ್ಲಿ ಹಳೆ ಮತ್ತು ನವ ಶಿಲಾಯುಗದ ಆಯುಧಗಳು, ದಿನಬಳಕೆಯ ವಸ್ತುಗಳು ಕಲ್ಲಿನ ವಿಗ್ರಹಗಳು ನಮ್ಮನ್ನು ಕುತೂಹಲದಿಂದ ದಿಟ್ಟಿಸಿ ನೋಡುವಂತೆ ಮಾಡುವ ಮಣ್ಣಿನ ಮಡಿಕೆ, ಆಟಿಕೆಗಳು ಸಹ ಇವೆ ಹಾಗೂ ಎರಡರಿಂದ 5ನೇ ಶತಮಾನದ ಗಂಗರ, ಬುದ್ಧನ ಮೂರ್ತಿಗಳು ಮತ್ತು ನಂದಿ, ವೀರಭದ್ರ, ಸೂರ್ಯ ಹಾಗೂ ತೀರ್ಥಂಕರರ ವಿಗ್ರಹಗಳು ಕಣ್ಮನ ಸೆಳೆಯುತ್ತದೆ.

**ಕಲ್ಯಾಣ ಮಂಟಪ:** ಪ್ರಾಚ್ಯ ವಸ್ತುಗಳ ಸಂಗ್ರಹ ನೋಡಿ ಬೆರಗಾಗಿದ್ದ ನಮ್ಮನ್ನು ಅರಮನೆಯ ಒಳಕೊಠಡಿ ಸೆಳೆಯಿತು, ಅಲ್ಲಿ ಪ್ರವೇಶಿಸುತ್ತಿದ್ದಂತೆ ಅಲ್ಲಿದ್ದ ಕಾಷ್ಠಶಿಲ್ಪದಿಂದಾದ ಸೇವಕರು ನಮ್ಮನ್ನು ಸ್ವಾಗತಿಸಿದರು. ಕೋಣೆಯಲ್ಲಿ ಹಲವಾರು ಪ್ರಮುಖ ಕನ್ನಡ ಸಾಹಿತ್ಯ ದಿಗ್ಗಜರು ಬಳಸಿದ ಬಟ್ಟೆಗಳು, ಸುಲೋಚನ, ಉರುಗೋಲು, ಕೈಗಡಿಯಾರ, ಊಟಕ್ಕೆ ಬಳಸುತ್ತಿದ್ದ ತಟ್ಟೆಗಳು ಅವರಿಗೆ ಸಂದ ಪ್ರಶಸ್ತಿಗಳು, ಹಸ್ತಪ್ರತಿಗಳು, ಅಪರೂಪದ ಛಾಯಾಚಿತ್ರಗಳು ಸೇರಿದಂತೆ ಅವರ ಜೀವನಕ್ಕೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಇವುಗಳು ನಮಗೆ ಕವಿಗಳ ಜೀವನಶೈಲಿ ಮಾತ್ರವಲ್ಲದೆ ಸರಳತೆಯನ್ನು ತಿಳಿಸಿಕೊಟ್ಟಿತು. ಕುವೆಂಪು, ದ.ರಾ. ಬೇಂದ್ರೆ, ಹಾಮಾನಾಯಕ್, ವೈದೇಹಿ, ದೇ. ಜವರೇಗೌಡ, ರಾಜಕೀಯ ಮುತ್ಸದ್ದಿ ನಿಜಲಿಂಗಪ್ಪ, ಕೊಡಗಿನ ಗೌರಮ್ಮ ಮತ್ತು ಜನರಲ್ ಕಾರ್ಯಪ್ಪ ಸೇರಿದಂತೆ ಹಲವಾರು ಗಣ್ಯ ವ್ಯಕ್ತಿಗಳ ಜೀವನಕ್ಕೆ ಸಂಬಂಧ ಪಟ್ಟ ವಸ್ತುಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ವಿಶೇಷ ಸಂಗತಿ ಎಂದರೆ ಗಾಂಧೀಜಿ ಅವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಳಸಿದ ಮೈಸೂರು ಸ್ಯಾಂಡಲ್ ಸೋಪನ್ನು ಕೂಡಾ ಇಡಲಾಗಿದೆ.

**ಖಜಾನೆಗಳು:** ರಾಜರ ಕಾಲದ ದೇವರ ಪೂಜಾ ಸಾಮಾಗ್ರಿಗಳು ಮತ್ತು ಮಕ್ಕಳ ಆಟಿಕೆಗಳು, ದಿನಬಳಕೆಯ ವಸ್ತುಗಳನ್ನೂ ಸಹಾ ಇಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಂದ ಹೊರಬಂದಂತೆ ನಮಗೆಲ್ಲಾ ಒಂದು ಅಚ್ಚರಿಯ ವಸ್ತು ಕಣ್ಣಮೇಲೆ ಹಾಯಿತು ಅದುವೆ ಹಿಂದಿನ ಕಾಲದಲ್ಲಿ ನಿರ್ಮಿಸಿದ್ದ ಲಿಫ್ಟ್. ಇದರಲ್ಲಿ ಅಳವಡಿಸಿದ್ದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಕಂಡು ಆಶ್ಚರ್ಯ ಚಕಿತಳಾದಳು ನನ್ನ ಸ್ನೇಹಿತೆ ಮೇಘನಾ. ನಂತರದಲ್ಲಿ ಅರಮನೆಯ ಅಂಗಳದಲಿದ್ದ **ಕೃಷ್ಣನ ವಿಗ್ರಹವು** ನಮ್ಮನ್ನೊಮ್ಮೆ ದಿಟ್ಟಿಸಿ ನೋಡುವಂತೆ ಮಾಡಿತು. ಆಗಿನ ಕಾಲಘಟ್ಟದಲ್ಲೇ ಮಳೆ ನೀರಿಗೆ ಮತ್ತು ಒಳ ಚರಂಡಿಗೆಂದೇ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿರುವುದು ಈ ಅರಮನೆಯ ವಿಶೇಷ.

**ಕುವೆಂಪು ಚಿತ್ರಶಾಲೆ:** ಎಡಭಾಗದ ಕೋಣೆಯಲ್ಲಿ ಕುವೆಂಪು ಚಿತ್ರಶಾಲೆಯನ್ನು ನಿರ್ಮಿಸಲಾಗಿದ್ದು, ಇಲ್ಲಿ ಕುವೆಂಪು ಅವರ ಕವಿತೆ–ಸಂದೇಶಗಳು ಹಾಗೂ ಅವರ ಛಾಯಾಚಿತ್ರಗಳನ್ನು ಪ್ರದರ್ಶಿಸಿದ್ದಾರೆ.

**ಮಲಗುವ ಕೋಣೆ!** ಮುಂದೆ ಸಾಗಿದಂತೆ ಸುಂದರವಾದ ಮೇಲ್ಛಾವಣಿಗಳನ್ನು ಹೊಂದಿದ್ದ ಒಂದು ಕೊಠಡಿ ನಮ್ಮನ್ನು ಸೆಳೆಯಿತು ಆದರೆ ಇದು ಮಲಗುವ ಕೋಣೆಗಾಗಿ ಮೀಸಲಾಗಿತ್ತು ಎಂಬುದು ಅಲ್ಲಿನ ಫಲಕ ನೋಡಿದಾಗ ನಮಗೆ ತಿಳಿಯಿತು. 8 ಬಾಗಿಲುಗಳನ್ನು ಹೊಂದಿದ್ದ ಈ ಕೋಣೆಯಲ್ಲಿ ಮರದಿಂದ ಮಾಡಿದ ವಿಗ್ರಹಗಳು ಗೊಂಬೆಗಳನ್ನು ಪ್ರದರ್ಶನಕ್ಕೆ ಇಡುವ ಮೂಲಕ ಸಂಗ್ರಹಾಲಯವಾಗಿ ಬಳಸಲಾಗುತ್ತಿದೆ.ವಿಶೇಷವಾಗಿ ರಾಮನ ವಿಗ್ರಹ, ಮಹಿಷನ ವಿಗ್ರಹ ಹಾಗೂ ಒಂದೇ ಮರದಿಂದ ಕೆತ್ತಲ್ಪಟ್ಟಿದ್ದ ಗಾಂಧಿ, ಅಬ್ರಹಂ ಲಿಂಕನ್ ಮತ್ತು ಪಾರ್ಶ್ವಗಳಲ್ಲಿ ಬುದ್ಧ ಮತ್ತು ಜೀಸಸ್‌ನ ಮುರ್ತಿ " ಮಾನವಜಾತಿ ತಾನೊಂದೆ ಕುಲಂ" ಎಂಬುದನ್ನು ಸಾರುತ್ತಿದೆ. ಈ ಕೋಣೆಯ ಬಲಭಾಗದಲ್ಲಿನ ಮತ್ತೊಂದು ಕೋಣೆಯಲ್ಲಿ ಮರದಿಂದ ಮಾಡಿದ ಪ್ರಾಣಿಗಳ ವಿಚಿತ್ರ ಆಕಾರಗಳು ಮತ್ತು ತ್ರಿಮುಖ ಬ್ರಹ್ಮನ ಕಾಷ್ಠಶಿಲ್ಪ ನಮಗೆ ಸ್ವಲ್ಪ ಭಯವನ್ನು ಉಂಟುಮಾಡಿತು.

**ನೃತ್ಯ ಮಂಟಪ:** ಮುಂದೆ–ಮುಂದೆ ಸಾಗುತ್ತಿದ್ದಂತೆ ಆಯಾಸಗೊಂಡಿದ್ದ ಗೆಳತಿ ನಂದಿನಿ ನೃತ್ಯ ಮಂಟಪಕ್ಕೆ ಬಂದೊಡನೆ ತನ್ನ ದಣಿವನ್ನು ಮೀರಿ ತಾನು ಇಲ್ಲಿ ನೃತ್ಯ ಮಾಡಬೇಕು. ಹಾಗೂ ಸೆಲ್ಫಿ ಕ್ಲಿಕ್ಕಿಸಬೇಕೆಂಬ ಬಯಕೆ ಇತ್ತಳು ಆದರೆ ಛಾಯಾಚಿತ್ರ ನಿಷೇಧ ಎಂಬ ಫಲಕ ಮತ್ತೆ ಅವಳನ್ನು ಎಚ್ಚರಿಸಿತು.ನೃತ್ಯ ಮಂಟಪವು ತೇಗದ ನೆಲಹಾಸುವನ್ನು ಹೊಂದಿದ್ದು ಮೇಲಂತಸ್ತಿನಲ್ಲಿ ಕೂರುವ ಆಸನಗಳ ವ್ಯವಸ್ಥೆ ಇದ್ದಂತೆ ಕಾಣುತ್ತಿತ್ತು ಹಾಗೂ ಮಂಟಪದ ಸುತ್ತ ನಾಲ್ಕು ಮರದ ಕಂಬಗಳನ್ನು ಇಡಲಾಗಿದ್ದು, ಶ್ರೀ ಚೆನ್ನಬಸವೇಶ್ವರ ದೇವಾಲಯದ ಪ್ರಾಚೀನ ಕೆತ್ತನೆಗಳು ಹಾಗೂ ಬಲು ದೊಡ್ಡದಾದದ ಮಾರಿಕಾಯು ವಿಗ್ರಹವನ್ನು ಇಡಲಾಗಿದೆ.

**ಜಾನಪದ ವಸ್ತು ಸಂಗ್ರಹಾಲಯ:** ಅರಮನೆಯ ಪ್ರಮುಖ ಆಕರ್ಷಕ ತಾಣ ಜನಪದ ವಸ್ತು ಸಂಗ್ರಹಾಲಯ ಇದು ಸುಮಾರು 6500 ಕ್ಕೂ ಹೆಚ್ಚು ಜಾನಪದ ಕಲೆ ಮತ್ತು ಕಲಾಕೃತಿಗಳನ್ನು ಪ್ರದರ್ಶಿಸುತ್ತದೆ. ಏಷ್ಯಾದ ಜಾನಪದ ಕಲೆಗಳ ದೊಡ್ಡ ಸಂಗ್ರಹಗಳಲ್ಲಿ ಒಂದಾಗಿದೆ ಎಂದು ಪರಿಗಣಿಸಲ್ಪಟ್ಟ ಈ ವಸ್ತುಸಂಗ್ರಹಾಲಯವು ಕರ್ನಾಟಕದ ಹಳ್ಳಿಗಳಿಂದ ತಂದ ವಿವಿಧ ಮರದ ಮತ್ತು ಚರ್ಮದ ಪ್ರತಿಮೆಗಳನ್ನು ಹೊಂದಿದೆ. ಇದರ ಜೊತೆಗೆ, ವಿವಿಧ ಗ್ರಾಮೀಣ ಆಭರಣಗಳು, ಲೋಹದ ಸಾಮಾನುಗಳು, ಉಪಕರಣಗಳು, ವಿಧ್ಯುಕ್ತ ಹೆಡ್ಗಿಯರ್ ಮತ್ತು ವೇಷಭೂಷಣಗಳು, ಬೊಂಬೆಗಳು, ಅಲಂಕಾರಿಕ ಮುಖವಾಡಗಳು, ದೇವಸ್ಥಾನ ಮತ್ತು ಮನೆ ಮಾದರಿಗಳು ಇತ್ಯಾದಿಗಳನ್ನು ಇದು ಪ್ರದರ್ಶಿಸುತ್ತದೆ ವಿಶೇಷವಾಗಿ ಒಂದೇ ಮಾವಿನ ಮರದಿಂದ ಮಾಡಲಾದ ಇಪತ್ತಾರು ವರೆ ಅಡಿ ಉದ್ದದ ಅತಿ ದೊಡ್ಡ ದೋಣಿಯನ್ನು ಸಂಗ್ರಹಿಸಲಾಗಿದೆ.

**ಅರಮನೆಯ ವಿನ್ಯಾಸ:** ಅರಮನೆಯಲ್ಲಿ 123 ಕೋಣೆಗಳು, 290 ಬಾಗಿಲಿಗಳು, 398 ಕಿಟಕಿಗಳು, 330 ಗಾರೆ ಕಂಬಗಳು, 96 ಮರದ ಕಂಬಗಳನ್ನು ಹೊಂದಿದೆ. ಇಂಡೀ ಸಾರ್ಸನಿಕ್, ಗ್ರೀಕ್ ಮತ್ತು ಇಸ್ಲಾಮಿಕ್ ವಾಸು ಶೈಲಿಯನು ಹೊಂದಿದೆ. ಅರಮನೆಯು ಮೂರು ವಿಭಾಗಗಳನ್ನು ಹೊಂದಿದ್ದು ಪ್ರತಿಯೊಂದನ್ನು ಸಂಧಿಸಲು ಪ್ರತಿ ಅಂಚಿನಿಂದ ಸೇತುವೆ ರೀತಿಯ ವ್ಯವಸ್ಥೆಯನ್ನು ಮಡಲಾಗಿದೆ. ಇದನ್ನು ಗಾಜಿನ ಮನೆ ಎಂತಲೂ ಕರೆಯುತ್ತಾರೆ. ಅರಮನೆಯ ಹೊರ ಆವರಣದಲ್ಲಿ ಹಲವಾರು ಮರದ ರಥಗಳನ್ನು ಸಂಗ್ರಹಿಸಿದ್ದಾರೆ ಮತ್ತು ರಾಣಿ ಅವರ ಮುದ್ದಿನ ನಾಯಿಗಳ ಸಮಾದಿ ಕಲ್ಲುಗಳನ್ನು ನೆಡಲಾಗಿದೆ.

**ಪ್ರವಾಸಿಗರ ತಾಣ:** ವಿ.ವಿ ಯ ಆವರಣದಲ್ಲಿ ಅರಮನೆ ಇದ್ದರೂ ಮೈಸೂರಿನ ಪ್ರಮುಖ ಅರಮನೆ ಪ್ರವಾಸಿಗರ ತಾಣವಾಗಿದೆ. ಪ್ರವೇಶ ಉಚಿತ ಇರುವುದರಿಂದ ಮೈಸೂರು ನಗರ ಬಸ್‌ನಿಲ್ದಾಣದಿಂದ ಬರುವ ದೇಶ ಹಾಗೂ ವಿದೇಶಿ ಪ್ರವಾಸಿಗರು ಕಾಲ್ನಡಿಗೆಯಲ್ಲೆ ಅರಮನೆಯನ್ನು ತಲುಪಬಹುದು. ಆದರೆ ಸೆಲ್ಫಿ ಪ್ರಿಯರಿಗೆ ಮಾತ್ರ ಕಿಂತಿಚ್ಚು ನಿರಾಶೆಯಾದರು ಅರಮನೆಯ ಸೌಂದರ್ಯವು ಕಣ್ಣಿನ ಕ್ಯಾಮಾರದಲ್ಲಿ ಕ್ಲಿಕ್ಕಾಗಿ ಮನಸ್ಸಿನ ಗ್ಯಾಲರಿಯಲ್ಲಿ ಸೇವ್ ಆಗುವುದಂತು ಖಂಡಿತಾ

# ಜ್ಞಾನೋದಯದ ಹೊಸ ನಿವಾಸ

ಮಾನಸಾಗಂಗೋತ್ರಿಯಲ್ಲಿ ಬುದ್ಧನ ಪ್ರತಿಮೆಯನ್ನು ಸ್ಥಾಪಿಸಿದ ಬುದ್ಧನು ಪೀಪಲ್ಟ್ರೀ ಅಡಿಯಲ್ಲಿ ಜ್ಞಾನೋದಯವನ್ನು ಪಡೆದರು, ಅದು ಬೋಧಿ ವೃಕ್ಷ(ಬುದ್ಧ ಮರ) ಎಂದು ಜನಪ್ರಿಯವಾಯಿತು. ಈಗ, ಮೈಸೂರು ವಿಶ್ವವಿದ್ಯಾನಿಲಯವು ಜ್ಞಾನೋದಯದ ಕ್ಷಣವನ್ನು ಮರುಸೃಷ್ಟಿಸಿದೆ. ವಿಶ್ವವಿದ್ಯಾನಿಲಯದ ಪಿ.ಜಿ. ಕ್ಯಾಂಪಸ್ನ ಪ್ರಶಾಂತ ಮಾನಸಾಗಂಗೋತ್ರಿ ಎಂಬಲ್ಲಿ ಒಂದು ಪೀಪಲ್ ಮರದ ಕೆಳಗೆ ಬುದ್ಧನ ಧ್ಯಾನ ಭಂಗಿಯನ್ನು ಸ್ಥಾಪಿಸುವ ಮೂಲಕ. ಕಮಲದ ಮೇಲೆ ಕುಳಿತಿರುವ ಬುದ್ಧನೊಂದಿಗೆ ಬಿಳಿ ಕಲ್ಲಿನಿಂದ ಕೆತ್ತಿದ ಒಂಭತ್ತು ಅಡಿ ಎತ್ತರದ ಪ್ರತಿಮೆಯನ್ನು ಹುಡುಗರ ಹಾಸ್ಟೆಲ್ ಹತ್ತಿರ ಸ್ಥಾಪಿಸಲಾಗಿದೆ, ಇದು ರಸ್ತೆಯ ಡೇ ಕೇರ್ ಸೆಂಟರ್ಗೆ ಕಾರಣವಾಗುತ್ತದೆ. ಅಮೃತಶಿಲೆಯಲ್ಲಿ ಮಾಡಿದ ಕ್ರಮಗಳನ್ನು ಪ್ರತಿಮೆಗೆ ಹಾಕಲಾಗಿದೆ. ಸುತ್ತಮುತ್ತಲಿನ ಪ್ರದೇಶವನ್ನು ಉದ್ಯಾನವಾಗಿ ಅಭಿವೃದ್ಧಿಪಡಿಸಲಾಗುವುದು ಮತ್ತು ನಡೆಯುತ್ತಿರುವ ಕೃತಿಗಳನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ರಿಜಿಸ್ಟ್ರಾರ್ ಸಿ ಬಸವರಾಜು ಡೆಕ್ಕನ್ ಹೆರಾಲ್ಡ್ಗೆ ತಿಳಿಸಿದ್ದಾರೆ. ಈ ಪ್ರತಿಮೆಯನ್ನು ವಾರ್ಷಿಕ ಶತಮಾನೋತ್ಸವದ ಆಚರಣೆಯ ಭಾಗವಾಗಿ ಯೋಜಿಸಲಾಗಿತ್ತು ಆದರೆ, ಕಲ್ಲು ಬೆಂಚುಗಳು, ಹಸಿರು ಹುಲ್ಲು, ಕುಡಿಯುವ ನೀರು ಮತ್ತು ಬೆಳಕನ್ನು ಹೊಂದಿರುವ ಉದ್ಯಾನವು ಡಾ. ಬಿ. ಆರ್. ಅಂಬೇಡ್ಕರ್ ಅವರ ಗೌರವಾರ್ಥವಾಗಿ 8 ಲಕ್ಷ ರೂಪಾಯಿ ವೆಚ್ಚದಲ್ಲಿ ವಿನ್ಯಾಸಗೊಳಿಸಲಾಗಿತ್ತು. ಅವರ 125 ನೇ ಜನ್ಮ ವಾರ್ಷಿಕೋತ್ಸವದಂದು ಬಸವರಾಜು ಸೇರಿಸಲಾಗಿದೆ. ಮುಖ್ಯವಾಗಿ, ಒಮ್ಮೆ ನಿಗೂಢ ಬೌದ್ಧಧರ್ಮವು ಅರಮನೆಗಳ ನಗರದಲ್ಲಿ ತನ್ನ ಬೇರುಗಳನ್ನು ಹರಡುತ್ತಿದೆ, ವಾರ್ಸಿಟಿ ಅಧಿಕಾರಿಗಳನ್ನು ಪ್ರೇರೇಪಿಸುತ್ತದೆ. ಚೀನಾ, ಜಪಾನ್, ಥೈಲ್ಯಾಂಡ್, ಶ್ರೀಲಂಕಾ ಮತ್ತು ಇಂಡೋನೇಶಿಯಾಗಳಲ್ಲಿ ಭಾರತ ಮತ್ತು ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಹೆಚ್ಚಿನ ಜನರು ಬೌದ್ಧಧರ್ಮವನ್ನು ಸ್ವೀಕರಿಸಿದ್ದಾರೆ. ನಗರದಲ್ಲಿನ 4 ನೆಯ ಪ್ರತಿಮೆಯನ್ನು ರೆಕಾರ್ಡ್ ಮಾಡಲು, ಇದು ಬಲ್ಲಾಳ ವೃತ್ತದಲ್ಲಿ ಬುದ್ಧ ಸ್ತೂಪ ನಂತರ, ಸರಸ್ವತಿ– ಪರಮದಲ್ಲಿನ ಮಹಾಬೋಧಿ ಶಾಲೆ ಮತ್ತು ವಿಜಯನಗರದಲ್ಲಿನ ಸಂಜೀವಿನಿ ಸ್ಮಾರಕ ಹಾಲ್ನ ನಂತರ, ನಗರದ ನಾಲ್ಕನೇ ಬುದ್ಧನ ಪ್ರತಿಮೆಯಾಗಿದೆ. ಬುದ್ಧ ಸ್ತೂಪ ಅನೇಕ ಸಂದರ್ಭಗಳಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳೊಂದಿಗೆ ಅತ್ಯಂತ ಹೆಚ್ಚು ನಡೆಯುತ್ತಿರುವ ಸ್ಥಳವಾಗಿದೆ. ಇಂತಹ ಚಟುವಟಿಕೆಯ ವೇದಿಕೆಯಾಗಿ ಪ್ರತಿಷ್ಠಾನದ ಅಧಿಕಾರಿಗಳು ಪ್ರತಿಮೆಯ ಹತ್ತಿರ ಉಪನ್ಯಾಸಗಳನ್ನು ಮತ್ತು ಸಭೆಗಳನ್ನು ಆಯೋಜಿಸುವುದರ ಜೊತೆಗೆ, ಉಲ್ಲಾಸಕರ ವಾತಾವರಣ ಮತ್ತು ವಿದ್ಯಾರ್ಥಿಗಳಿಗಾಗಿ ಜನರಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುವ ಮೂಲಕ ವಾರ್ಸಿಟಿ ಅಧಿಕಾರಿಗಳು ಕೂಡಾ ಬಯಸುತ್ತಾರೆ. ಈ ವಿಷಯದಲ್ಲಿ ವಾರ್ಸಿಟಿ ಅಧಿಕಾರಿಗಳಿಗೆ ಒಂದು ಮನವಿಯನ್ನು ನೀಡಿದ್ದ ಕೆಲವು ಮನೋಭಾವದ ವಿದ್ಯಾರ್ಥಿಗಳನ್ನು ಉಲ್ಲೇಖಿಸಬೇಕು. ಬುದ್ಧ ಪೂರ್ಣಿಮಾವನ್ನು ಆಚರಿಸಲು ಒಂದೇ ಮರದ ಕೆಳಗೆ 25 ಬುದ್ಧನ ವಿಗ್ರಹಗಳನ್ನು ತಾತ್ಕಾಲಿಕವಾಗಿ ಪವಿತ್ರಗೊಳಿಸುವ ಮೂಲಕ ಅವರು ಎರಡು ವರ್ಷಗಳ ಹಿಂದೆ 2014 ರ ಮೇ 14 ರಂದು ಟೋನ್ ಅನ್ನು ಹೊಂದಿದ್ದರು. ಕೃತಿಗಳು ಮುಗಿದ ನಂತರ, ಬುದ್ಧ ಕಟ್ಟೆ, ಪ್ರತಿಮೆಯ ಸುತ್ತಲೂ ವೃತ್ತಾಕಾರದ ಮೆಟ್ಟಿಲುಗಳ ಮೇಲೆ ಸ್ಥಾಪಿಸಲ್ಪಟ್ಟಿದೆ, ಗಂಗೋತ್ರಿ ಈಗಾಗಲೇ ಗಡಿಯಾರದ ಗೋಪುರ ಮತ್ತು ಕವಿ ಕುವೆಂಪುವಿನ ಪ್ರತಿಮೆಯನ್ನು ಹೊಂದಿದ್ದು, ಮತ್ತೊಂದು ಹೆಗ್ಗುರುತು ಎಂದು ಖಚಿತ. ಗಡಿಯಾರವು ಸುತ್ತಿನ ಕ್ಯಾಂಟೀನ್ ಮುಂದೆ ವೃತ್ತವನ್ನು ರೂಪಿಸುತ್ತದೆ, ಆದರೆ ಕುವೆಂಪುವಿನ ಪ್ರತಿಮೆಯು ಸಂದರ್ಶಕರನ್ನು ಮುಖ್ಯ ಪ್ರವೇಶದ್ವಾರದಲ್ಲಿ ಸ್ವಾಗತಿಸುತ್ತದೆ.

**ನನ್ನವ್ವ.... (ಹೃದಯದ ಮಿಡಿತ ನನ್ನ ಅವ್ವ)**

ಅವ್ವ ನಿನ್ನ ಗರ್ಭದಲ್ಲಿ ನನ್ನ ಹೊತ್ತು ರಕ್ಷಿಸಿರುವೆ,

ನಿನ್ನ ಮಡಿಲಲ್ಲಿ ಲಾಲಿ ಹಾಡಿ ನನ್ನ ಮಲಗಿಸಿರುವೆ

ಬೆವರು ಸುರಿಸಿ, ಕಳೆಯ ಕಿತ್ತು, ನಿನ್ನ ಕೈ

ಬೊಬ್ಬೆಗೊಂಡರು ಅದ್ದೇ ಅಂಗೈಯಲ್ಲಿ ತುತ್ತು ನೀಡಿ

ನನ್ನ ಪಾಲನೆ ಮಾಡಿರುವೆ ಅವ್ವ... ನನ್ನವ್ವ.

ತಪ್ಪುಗಳು ಮಾಡಿದಾಗ ಬುದ್ದಿ ಹೇಳಿ, ಬೆಳೆಸಿರುವೆ,

ನಾ ತಿಳಿಯದಿದ್ದರೂ ನನ್ನ ಮಗ ಎರಡಕ್ಷರ ತಿಳಿಯಲೆಂದು

ತನ್ನ ಆಸೆ– ಕನಸುಗಳನ್ನು ಬದಿಗೊತ್ತಿ

ಹೊಟ್ಟೆ– ಬಟ್ಟೆ ಕಟ್ಟಿ ನನ್ನ ಶಾಲೆಗೆ ಕಳಿಸಿರುವೆ

ನನ್ನ ನಗುವಿನಲ್ಲಿ ನನ್ನ ನೋವ ಮರೆತು

ನನ್ನ ಏಳಿಗೆಗಾಗಿ ಸದಾ ದೇವರಲ್ಲಿ ಬೇಡುತ್ತಿರುವೆ, ಅವ್ವ ..ನನ್ನವ್ವ.

ನೀ ಹಸಿದು ನನ್ನ ಹೊಟ್ಟೆ ತುಂಬಿಸಿರುವೆ

ಮನೆಯ– ಮಾಳಿಗೆಯಲ್ಲಿ ಮಳೆ– ಸುರಿದರೆ, ತಾ...

ನೆನೆದು ನನ್ನ ಬೆಚ್ಚಗಿರಿಸಿರುವೆ,

ಹಳೆಯ ಸೀರೆಯ ಉಟ್ಟು, ನನಗೆ ಹೊಸ ಅಂಗಿಯ

ತೊಡಿಸಿ, ನನ್ನ ಸಂತೋಷದಲ್ಲಿ ನನ್ನ ಸಾವಿರ

ನೋವ( ಮರೆಯುವೆ) ಮರೆತಿರುವೆ... ಅವ್ವ...ನನ್ನವ್ವ.

ಭೂಮಿಯೊಳಗೆ ಗುಡಿಯ ಕಟ್ಟಿ ಗೋಪುರಮಾಡಿ

ಕಾಣದ ದೇವರ ಶಿಲೆಯ, ಕೆತ್ತಿ,

ಮೂರ್ತಿ ಮಾಡಿ ದಿನವು ಪೂಜಿಸುವರು

ಕಾಣುವ ತಾಯಿ ದೇವರಿಗೆ,ಮನವೆಂಬ ಗುಡಿಯಲ್ಲಿ ಗೋಪುರವಮಾಡಿ,

ಅವಳ, ತ್ಯಾಗವ ದಿನವ ನೆನೆಯೋಣ,

ಅವಳಿಗಾಗಿ ಬದುಕೋಣ, ಅವಳ ಸಂತೋಷ ಕನಸುಗಳನ್ನು

ಈಡೇರಿಸಲು ದಿನವು ಪ್ರಯತ್ನಿಸೋಣ...

ನನ್ನ ತ್ಯಾಗವನ್ನು ವರ್ಣಿಸಲಾಗದವ್ವ,

ಏಕೆಂದರೆ ವರ್ಣಿಸಲು ಪದಸಾಲದು...

ನಿಸ್ವಾರ್ಥವಿರುವ ಪ್ರೀತಿಯ ನೀಡುವವಳೆಂದರೆ

ಈ ಪ್ರಪಂಚದಲ್ಲಿ ತಾಯಿ ದೇವರೊಬ್ಬಳೇ......

ಸಂಚಿಕೆ –18 ಸಂಪುಟ – 50 ದಿನಾಂಕ: 30.05.2018 ಪುಟ–4

# ಮಾನಸಗಂಗೋತ್ರಿಯ ತಾಯಿ ಹೃದಯ –ಶಿಶು ಪಾಲನ ಕೇಂದ್ರ

ಇಂದು ಯಾಂತ್ರಿಕ ಯುಗ, ಜೀವನೋಪಾಯಕ್ಕಾಗಿ ಎಷ್ಟೇ ದುಡಿದರೂ ಸಾಲದು ಈ ಮಧ್ಯೆ ತಮ್ಮ ಕಂದಮ್ಮಗಳಿಗೆ ಸಮಯ ನೀಡಲು ಸಾಧ್ಯವಾಗದವರು ಶಿಶುಪಾಲನ ಕೇಂದ್ರಗಳ ಮೊರೆಹೋಗಬಹುದು. ತಂದೆ–ತಾಯಿ ಕೆಲಸಕ್ಕೆ ಹೋದ ವೇಳೆಯಲ್ಲಿ ಅವರ ಮಕ್ಕಳನ್ನು ಪೋಷಿಸಲು ಅವರೊಂದಿಗೆ ಒಡನಾಡಿಯಾಗಿರುವ ಉದ್ದೇಶವನ್ನರಿತು ಮೈಸೂರು ವಿಶ್ವವಿದ್ಯಾನಿಲಯ ಪುಟ್ಟ ಶಿಶು ಪಾಲನ ಕೇಂದ್ರದ ಮೂಲಕ ಮಕ್ಕಳ ಕಿಲ ಕಿಲ ನಗುವಿಗೆ ಅನುವು ಮಾಡಿಕೊಟ್ಟು ತನ್ನ ತಾಯಿ ಜವಬ್ದಾರಿಯನ್ನು ನಿರ್ವಹಿಸುತ್ತಿದೆ ಎಂದ ಟಿಟಿಟಿ

ಹೌದು, ಮಾನಸಗಂಗೋತ್ರಿ ಕೇವಲ ವಿದ್ಯಾರ್ಥಿಗಳ ಜ್ಞಾನದಾಸೋಹಕ್ಕೆ ಸೀಮಿತವಾಗಿರದೆ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಪುಟ್ಟ ಮಕ್ಕಳನ್ನು ಪಾಲಿಸುವತ್ತ ತನ್ನ ಒಲವು ನೀಡಿದೆ. ಇದಕ್ಕಾಗಿ ಮೈಸೂರು ವಿಶ್ವವಿದ್ಯಾನಲಯ 2009ರ ಸೆಪ್ಟೆಂಬರ್ 2ರಂದು ಆರಂಭಿಸಿದ ಈ ಪಾಲನ ಕೇಂದ್ರ ಆರಂಭದಲ್ಲಿ ಕೇವಲ ಕ್ಯಾಂಪಸ್ ನ ಬೋಧಕೇತರ ವೃಂದ, ಸಿಬ್ಬಂದಿ ವರ್ಗ ಹಾಗು ಕಾಲೇಜಿನ ಸಂಶೋಧನ ವಿದ್ಯಾರ್ಥಿಗಳ ಮಕ್ಕಳ ಪಾಲನೆಗೆ ಅವಕಾಶ ನೀಡಿತ್ತು ಆದರೇ ಇದೀಗ ಹೊರಗಿನನವರ ಮಕ್ಕಳಿಗೂ ಅವಕಾಶ ಕಲ್ಪಿಸಿದೆ. ಕ್ಯಾಂಪಸ್‌ನ ಮಾನವ ಅಭಿವೃದ್ಧಿ ವಿಭಾಗಕ್ಕೆ



ಅಂಟಿಕೊಂಡಂತಿರುವ ಈ ಕೇಂದ್ರ ಸುಮಾರು 6 ತಿಂಗಳ ಅಸುಗೂಸುವಿನಿಂದ 4 ವರ್ಷದ ಕಂದಮ್ಮಗಳ ಸಾಮಾಜಿಕ, ಭಾವಾನಾತ್ಮಕ ಹಾಗೂ ಅವರ ವ್ಯಕ್ತಿತ್ವ ಕುರಿತು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ವಾತಾವರಣ ಕಲ್ಪಿಸಿದೆ. ಅಲ್ಲದೇ ಈ ಮೂಲಕ ಪೋಷಕರ ಉನ್ನತ ವ್ಯಾಸಾಂಗಕ್ಕೆ ಮತ್ತು ಉದ್ಯೋಗಕ್ಕೆ ಪರೋಕ್ಷವಾಗಿ ಬೆಂಬಲಿಸುತ್ತಿದೆ ಎಂದರೇ ಅತಿಶಯೋಕ್ತಿಯಲ್ಲ.

ವರ್ಷದಲ್ಲಿ 30 ಮಕ್ಕಳ ಪಾಲನೆ–ಪೋಷಣೆಗೆ ಅವಕಾಶ ಮಾಡಿಕೊಟ್ಟಿರುವ ಶಿಶು ಪಾಲನ ಕೇಂದ್ರವು ವಿಶ್ವವಿದ್ಯಾನಿಲಯವು ಸಲಹಾ ಸಮಿತಿ ನಿರ್ವಹಣೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇಂದು ಮೈಸೂರಿನಲ್ಲಿ ಇರುವ ಹಲವಾರು ಡೇ ಕೇರ್ ಸೆಂಟರ್ ಗಳಿಗೆ ಮಾದರಿಯಾಗಿದೆ. ಅಷ್ಟೇ ಅಲ್ಲ ಹೋಮ್ ಸೈನ್ಸ್ ವಿದ್ಯಾರ್ಥಿಗಳಿಗೆ ಕಲಿಕಾ ಕೇಂದ್ರವಾಗಿ ಫುಡ್ ಸೈನ್ಸ್ ಮತ್ತು ನ್ಯೂಟ್ರೇಷಿಯನ್ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್‌ಗೆ ಮುಖ್ಯ ಕೇಂದ್ರವಾಗಿದೆ. ಪ್ರಸ್ತುತ 24 ಪುಟ್ಟ ಮಕ್ಕಳನ್ನು ಪರಿಣಿತರು ಹಾಗು ವೈದ್ಯರುಗಳ ರಕ್ಷಣೆಯಲ್ಲಿ ಓರ್ವ ಶಿಕ್ಷಕಿ ಮತ್ತು ನಾಲ್ವರು ಸಹಾಯಕರುಗಳ ಸಹಕಾರದೊಂದಿಗೆ ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಮಗುವಿನ ಆಹಾರ ಸೇವನೆ ಆಟ–ಪಾಠಗಳನ್ನು ಸೇರಿದಂತೆ ಕಟ್ಟು ನಟ್ಟಿನ ನಿಯಮಗಳ ಅನುಸಾರವಾಗಿ ಮಗುವಿನ ತಂದೆ–ತಾಯಿ, ಪೋಷಕರ ಗುರುತಿನ ಚೀಟಿ ಇಲ್ಲದೇ ಮಗುವನ್ನು ಹೊರಗೆ ಬಿಡದಂತೆ ಭದ್ರಾತಾವ್ಯವಸ್ಥೆ ಕಲ್ಪಿಸಿ ದಿನದಲ್ಲಿ ಸಂಪೂರ್ಣ ಒಬ್ಬ ತಾಯಿಯ ಜವಾಬ್ದಾರಿ ಹೊಂದಿದೆ.

ಬೆಳಗ್ಗೆಯಿಂದ ಸಂಜೆಯವರೆಗೆ ಮಕ್ಕಳನ್ನು ಮುದಗೊಳಿಸುವ ವ್ಯಾಯಾಮ, ದೇವರ ನಾಮ ಸ್ಮರಣೆ, ಅವರ ಗಮನ ಕೆಂದ್ರೀಕರಿಸಲು ಹಾಡು, ಕಥೆ ಜೊತೆಜೊತೆ ಜಾರುಬಂಡೆ ಉಯ್ಯಾಲೆಗಂತಹ ಆಟಿಕೆಗಳು ಮಗುವನ್ನು ಒಂಟಿತನದಿಂದ ದೂರ ಮಾಡಲು ತಮ್ಮ ಪ್ರಯತ್ನ ಮಾಡುತ್ತಿವೆ.ಕಾಲೇಜಿನ ಕ್ಯಾಂಪಸ್ ದಿನವಿಡೀ ವಿದ್ಯಾರ್ಥಿಗಳ ಪಾಠಪ್ರವಚನ, ಗ್ರಂಥಾಲಯದ ನಿಶಬ್ಧತೆ, ಕ್ಯಾಂಟೀನ್‌ನ ಗದ್ದಲ ಹರಟೆಗಳು, ಹುಡುಗ–ಹುಡುಗಿಯರ ನಗು, ವಾಹನಗಳ ಕರುಬಾರುಗಳಿಗೆ ಅಲ್ಲದೇ ಮುದ್ದು ಮಕ್ಕಳ ನಗು–ಅಳು, ಕೆಂದುಟಿಗಳ ತೊದಲುನುಡಿಗೆ ಕಿವಿಗೊಡುವ ಕೆಲಸ ಮಾಡುವ ಮೂಲಕ ಮೈಸೂರು ವಿಸ್ವವಿದ್ಯಾನಿಲಯದ ಮಾತೃ ಹೃದಯವಂತಿಕೆಯನ್ನು ಪ್ರದರ್ಶಿಸಿದೆ.

# ಮರಗಳಂತೆ ಬೆಳೆಯುವುದು ಯಾವಾಗ?

ಅಸಮಾನತೆ,ಜಾತಿಯತೆ ಬಡತನ ಸಿರಿತನ ಎಲ್ಲವನ್ನು ಮೀರಿದಂತಹ ಸ್ಥಳ ನಮ್ಮಶಾಲೆ ಮೇಲು,ಕೀಳು ಎಂಬ ಭಾವನೆ. ಬಡವ ಶ್ರೀಮಂತನೆಂಬ ಯಾವುದೇ ದೋರಣೆಗಳಿಲ್ಲದ, ನಿಷ್ಕಲ್ಮಷವಾದ ಸ್ನೇಹ ಪ್ರೀತಿಗಳ ಆಗರ ಅಲ್ಲಿ ಯಾವುದೇ ಲಿಂಗ ತಾರತಮ್ಯವಿಲ್ಲ ಗುರುಗಳೆ ದೇವರಾಗಿದ್ದು ಶಾಲೆಯೇ ದೇಗುಲವಾಗಿತ್ತು.

ನಮ್ಮೂರಿನ ಯಾವುದೇ ವ್ಯಕ್ತಿಗೂ ಅಂಜದ ನಾವು ಎಲ್ಲರಿಗೂ ಹಿಂದಿರುಗಿ ಮಾತನಾಡುತ್ತಿದ್ದವು. ಹೇಳಿದ್ದು ಕೇಳದಿದ್ರೆ ನಮ್ಮೂರಿನ ಜನರು ನಮ್ಮನ್ನು ಹೆದರಿಸಲು ಬಳಸುತ್ತಿದ್ದ ಒಂದೇ ಒಂದು ಅಸ್ತ್ರ ಅಂದರೆ ನಮ್ಮ ಮೇಸ್ಟ್ರಿಗೆ ಹೇಳ್ತಿವಿ ಅಂತ ಹೇಳುತ್ತಿದ್ದರು.

ನಾವು ಅಂಜುವುದು,ಹೆದರುವುದು ನಮ್ಮ ಮೇಸ್ಟ್ರಿ ಗೆ ಮಾತ್ರ ಅಂತ ಎಲ್ಲರಿಗೂ ಗೊತ್ತಾಗಿತ್ತು. ತುಂಟತನವಿದ್ದರು ಶಿಕ್ಷಕರ ಪ್ರೀತಿಯ ವಿದ್ಯಾರ್ಥಿಯಾಗಿದ್ದೆವು, ನಮ್ಮ ಶಾಲೆಯಲ್ಲಿ ಪ್ರತಿವರ್ಷ ಐದನೇ ತರಗತಿಯ ವಿದ್ಯಾರ್ಥಿಗಳನ್ನು ಮಂತ್ರಿಮಂಡಲ ಅಂತ ಮಾಡಿ ವಿದ್ಯಾರ್ಥಿಗಳಿಗೆ ಅಧಿಕಾರ ನೀಡುತ್ತಿದ್ದರು.

ಅದರಲ್ಲಿ ಅರೋಗ್ಯಮಂತ್ರಿ, ಸ್ವಚ್ಛತ ಮಂತ್ರಿ,ಅಹಾರ ಮಂತ್ರಿ ಹೀಗೆ ಅನೇಕ ಕಾರ್ಯಗಳಿಗೆ ವಿದ್ಯಾರ್ಥಿಗಳನ್ನು ನೇಮಿಸುತ್ತಿದ್ದರು. ಈ ಸಂದರ್ಭದಲ್ಲಿ ನನ್ನನ್ನು ವಾರ್ತಾಮಂತ್ರಿಯನ್ನಾಗಿ ನೇಮಿಸಲಾಯಿತು. ನಾನು ಅದರಂತೆ ಪತ್ರಿಕೆಗಳನ್ನು ಜೋಪಾನವಾಗಿ ಎತ್ತಿಡುವುದು, ವಿದ್ಯಾರ್ಥಿಗಳಿಗೆ ಪತ್ರಿಕೆಗಳನ್ನು ಓದಲು ನೀಡುವುದು ನನ್ನ ಕರ್ತವ್ಯವಾಗಿತು ಹೀಗೆ ಶಾಲೆಯ ಪರಿಸರವನ್ನು ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಲು ಈ ರೀತಿ ಮಾಡುತ್ತಿದ್ದರು.

ಈ ಸಂದರ್ಭದಲ್ಲಿ ನಮ್ಮ ಶಾಲೆಯ ಅಭಿವೃದ್ಧಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿತ್ತು ಶಾಲೆಗೆ ಕಾಂಪೌಂಡ್ ಮತ್ತು ಶಾರದ ದೇವಿ ವಿಗ್ರಹ ಸ್ಥಾಪನೆ, ಉತ್ತಮ ಪರಿಸರ ನಿರ್ಮಾಣ ಹೀಗೆ ಅನೇಕ ಕಾರ್ಯಗಳಲ್ಲಿ ನಾನು ನನ್ನ ಸ್ನೇಹಿತರು ಹೆಚ್ಚು ಭಾಗಿಯಾಗಿದ್ದವು.

ಕಲ್ಲುಗಳನ್ನು ಆಯ್ದು ತಂದವು, ಗಾರೆ ಕೆಲಸಕೆ ನೀರಿನ ಸೌಲಭ್ಯ ಮಾಡಿದವು, ಗಿಡಗಳನ್ನು ನೆಟ್ಟು, ಕೆರೆಯಿಂದ ನೀರು ತಂದು ಹಾಕಿದವು, ಹೀಗೆ ಅನೇಕ ಕಾರ್ಯಗಳಲ್ಲಿ ಭಾಗಿಯಾದ ನಾವು.

ನಮ್ಮ ಮೇಸ್ಟ್ರು ನಮ್ಮನ್ನ ಯಾಕೆ ಹೀಗೆ ಗೋಳು ಹೂಯ್ದು ಕೊಳ್ತಾರೆ ಅಂತ ಶಾಪ ಹಾಕಿದ್ದರು. ಇಂದು ನಾವು ನೆಟ್ಟ ಗಿಡಗಳು ಮರಗಳಾಗಿ ಬೆಳೆದು ಫಲ ನೀಡುತ್ತಿವೆ, ಅಂದು ನೀರು ಹಾಕಿ ಬೆಳೆಸಿದ ವಿದ್ಯಾರ್ಥಿಗಳು, ಗಿಡ ನೆಟ್ಟ ಬೆಳೆಸಿದ ಶಿಕ್ಷಕರು ಯಾರು ಆ ಶಾಲೆಯಲ್ಲಿ ಇಲ್ಲದಿದ್ದರು ಅವುಗಳನ್ನು ಅದೇ ಊರಿನ ಹುಡುಗನಾದ ನನಗೆ ಅವುಗಳನ್ನು ಕಂಡಾಗ ಹೃದಯ ತುಂಬಿ ಬರುತ್ತದೆ.

ಆ ಮರಗಳ ಫಲವನ್ನು ನಾವು ಸವಿಯದಿದ್ದರು ನಮ್ಮ ಗುರುಗಳು ಮಾಡಿಸಿದ ಉತ್ತಮ ಕಾರ್ಯದಿಂದ ಇಂದು ನನ್ನ ಸಹೋದರ, ಸಹೋದರಿಯರಿಗೆ ನೆರಳಾಗಿ, ಗುರುಗಳಿಗೆ ಫಲವಾಗಿ ಸಿಗುತ್ತಿರುವುದು ಸಂತ್ರೊಷವನ್ನುಂಟು ಮಾಡುತ್ತದೆ.

ನಾವು ನೆಟ್ಟ ಮರಗಳು ಬೆಳೆದು ನೆರಳು, ಫಲವನ್ನು ನೀಡುತ್ತಿವೆ ನಾವು ನಮ್ಮ ಶಾಲೆಗೆ ಊರಿಗೆ, ಗುರುಗಳಿಗೆ ಯಾವುದೇ ಹೆಸರು ನೀಡಿಲ್ಲ ಎಂಬ ನೋವು, ಬೇಸರ ಕಾಡಿದರು ನಂಬಿಕೆ ಇದೆ ಮರಗಳಂತೆ ಬೆಳೆದು ನೆರಳಾಗಿ, ಫಲವನ್ನು ನೀಡುವ ಮರಗಳು ಆಗುವ ಕನಸು ಈಡೇರುತ್ತದೆ ಎಂಬ ಭರವಸೆ ಇದೆ.

ಊರಿನ ಜನರು ವಿದ್ಯೆಗಳಿಸುವ ಎಲ್ಲ ಮಕ್ಕಳಿಂದ ಬಯಸುವುದು ಎಲ್ಲ ಮಕ್ಕಳು ನೆರಳು, ಫಲವನ್ನು ನೀಡುವಂತಹರಾಗಬೇಕು ಎಂದು ಬಯಸುತ್ತಾರೆ ಎಂದೆನಿಸುತ್ತಿದೆ.

# ಕೋಟಿ ತರಹ ಈ ಪ್ರೇಮ ಬರಹ




ದಕ್ಷಿಣ ಭಾರದ ಖ್ಯಾತ ನಟ ಅರ್ಜುನ್ ಸರ್ಜಾ ತಮ್ಮ ಪುತ್ರಿಯನ್ನು ಚಿತ್ರರಂಗಕ್ಕೆ ಪರಿಚಯಿಸಲು ಪ್ರೇಮ ಬರಹ ಚಿತ್ರ ಮಾಡಿದ್ದಾರೆ. ಇದೊಂದು ಅಪ್ಪಟ ಪ್ರೇಮಕತೆಯ ಸಿನಿಮಾ ಎನ್ನುವುದು ವಿಶೇಷ. ಸಾಮಾನ್ಯವಾಗಿ ಪ್ರೆಮಿಗಳ ಜೀವನದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಆ ಎಲ್ಲ ಸಮಸ್ಯೆಗಳನ್ನೂ ತುಂಬಾ ಗಂಭೀರವಾಗಿ ಪರಿಗಣಿಸಿ ಅವುಗಳಿಗೆ ಪರಿಹಾರ ಹುಡುಕುತ್ತಾರೆ. ಪ್ರೆಮ ಬರಹದಲ್ಲೂ ಅಂತಹ ಸಮಸ್ಯೆಗಳಿವೆ. ಆದರೆ ನಿರ್ದೇಶಕ ಅರ್ಜುನ್ ಸರ್ಜಾ ಅವುಗಳನ್ನು ಸೀರಿಯಸ್ ಆಗಿ ತೆಗೆದುಕೊಂಡಂತೆ ಕಾಣುವುದಿಲ್ಲ.

1999ರಲ್ಲಿ ನಡೆಯುವ ಕಥೆ ಸಿನಿಮಾದಲ್ಲಿದೆ. ನಾಯಕ ಸಂಜಯ್ (ಚಂದನ್) ಮತ್ತು ಮಧು (ಐಶ್ವರ್ಯಾ) ಇಬ್ಬರೂ ವಾಹಿನಿಯೊಂದರ ಪತ್ರಕರ್ತರು. ಕಾರ್ಗಿಲ್ ಯುದ್ಧವನ್ನು ಲೈವ್ ಕವರೇಜ್ ಮಾಡಲು ತೆರಳಿದಾಗ ಪ್ರೆಮಾಂಕುರ ಆಗುತ್ತದೆ. ವಿಪರ್ಯಾಸವೆಂದರೆ ಮಧುಗೆ ತಮ್ಮ ತಂದೆಯ ಆತ್ಮಿಯ ಗೆಳಯನ ಮಗನೊಂದಿಗೆ ಎಂಗೇಜ್‌ಮೆಂಟ್ ಆಗಿರುತ್ತದೆ. ಕಾರ್ಗಿಲ್‌ನಿಂದ ಬಂದ ತಕ್ಷಣ ಮದುವೆಗೂ ಸಿದ್ಧತೆ ನಡೆಯುತ್ತದೆ. ಇದು ಗೊತ್ತಾಗಿ ಮಧುವನ್ನು ದೂರವಿಡಲು ಚಂದನ್ ಆರಂಭಿಸುತ್ತಾನೆ. ಈ ಪ್ರೆಮಿಗಳು ಒಂದಾಗುತ್ತಾರಾ ಅಥವಾ ಇಲ್ಲವಾ ಎನ್ನುವುದೇ ಸಿನಿಮಾ.

ತೀರಾ ಸೀದಾ ಸಾದಾ ಸ್ಟೋರಿ ಸಿನಿಮಾದಲ್ಲಿದೆ. ಹಾಗಾಗಿ ಚಿತ್ರಕತೆಯಲ್ಲಿ ಹೆಚ್ಚು ಕೆಲಸವಾಗಬೇಕಿತ್ತು. ಚಿತ್ರದ ಮೇಕಿಂಗ್ ಮತ್ತು ನಿರ್ದೇಶನದಿಂದಾಗಿ ಇಷ್ಟವಾಗುವ ನಿರ್ದೇಶಕರು, ಚಿತ್ರಕಥೆ ಹೆಣೆಯುವಲ್ಲಿ ಸೋತಿದ್ದಾರೆ. ಸಿನಿಮಾ ಎನ್ನವುದು ನಿರ್ದೇಶಕರ ಮಾಧ್ಯಮ. ಹಾಗಾಗಿ, ನಿರ್ದೇಶಕರಾಗಿ ಅರ್ಜುನ್ ಇಷ್ಟವಾಗುತ್ತಾರೆ. ತಮ್ಮ ಹೊಸತನದ ಆಲೋಚನೆಯಿಂದಾಗಿ ತಮ್ಮ ಪುತ್ರಿಯನ್ನು ನಿರ್ದೇಶಕರು ಅದ್ಧೂರಿಯಾಗಿಯೇ ಲಾಂಚ್ ಮಾಡಿದ್ದಾರೆ. ಚಂದನ್‌ನಂತಹ ಚಂದದ ನಟನನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಎಚ್.ಸಿ ವೇಣು ಅವರ ಸಿನಮಾಟೋಗ್ರಫಿ ತನ್ನದೇ ಆದ ಕಾರಣದಿಂದಾಗಿ ಕಾಡುತ್ತದೆ. ಸ್ವಿಟ್ಜರ್‌ಲ್ಯಾಂಡ್ ಮತ್ತು ಕೇರಳವನ್ನು ತಮ್ಮ ಕ್ಯಾಮೆರಾದಲ್ಲಿ ಸೊಗಸಾಗಿ ಸೆರೆ ಹಿಡಿದಿದ್ದಾರೆ. ದೊಡ್ಡ ಕ್ಯಾನ್ವಾಸ್‌ನಲ್ಲಿ ನಿರ್ಮಾಣವಾಗಿರುವ

ನಿರ್ದೇಶಕ– ಅರ್ಜುನ್ ಸರ್ಜಾ

ನಿರ್ಮಾಪಕಿ– ನಿವೇದಿತಾ ಅರ್ಜುನ

ಸಂಗೀತ –ಜೆಸ್ಸಿಗಾಫ್ಟ್

ತಾರಾಗಣ– ಐಶ್ವರ್ಯ, ಅರ್ಜುನ್, ಚಂದನ್

ಸಾದುಕೋಕಿಲಾ. ಸುಹಾಸಿನಿ ಮೊದಲಾದವರು

ಪ್ರೆಮಬರಹಕ್ಕೆ ಇನ್ನೂ ಉತ್ತಮ ಹಾಡುಗಳನ್ನು ಕೊಡಬಹುದಿತ್ತು ಸಂಗೀತ ನಿರ್ದೇಶಕ ಜೆಸ್ಸಿ ಗಿಫ್ಟ್. ಈ ನಡುವೆಯೂ ಟೈಟಲ್ ಟ್ರ್ಯಾಕ್ ಚೆನ್ನಾಗಿದೆ. ಅಪ್ಪನ ನಿರ್ದೇಶನದಲ್ಲಿ ಐಶ್ವರ್ಯಾ ಸೊಗಸಾಗಿ ಕಾಣುತ್ತಾರೆ. ನಟನೆ, ಡಾನ್ಸ್, ಎಕ್ಸ್‌ಪ್ರೆಶನ್ಸ್ ಎಲ್ಲದರಲ್ಲೂ ಬೆಸ್ಟ್. ಕನ್ನಡದಲ್ಲಿ ಈಗಾಗಲೇ ಹಲವು ಸಿನಿಮಾಗಳನ್ನು ಮಾಡಿರುವ ಚಂದನ್, ಇಷ್ಟು ದಿನ ಒಳ್ಳೆಯ ನಿರ್ದೇಶಕರ ಕಣ್ಣಿಗೇಕೆ ಬಿದ್ದಿಲ್ಲ ಎನ್ನುವಂತೆ ನಟಿಸಿದ್ದಾರೆ. ಫೈಟ್ಸ್, ಡಾನ್ಸ್ ಎಲ್ಲದರಲ್ಲೂ ಉತ್ತಮ ಸ್ಕೋರ್ ಮಾಡಿದ್ದಾರೆ. ಹಿರಿಯ ನಿರ್ದೇಶಕ ಕೆ. ವಿಶ್ವನಾಥ್ ಅವರು ನಿರ್ವಹಿಸಿದ ಪಾತ್ರಕ್ಕೆ ಉತ್ತಮ ಕಂಠದಾನದ ಅವಶ್ಯಕತೆ ಇತ್ತು. ಇನ್ನುಳಿದಂತೆ ಸುಹಾಸಿನಿ, ಸಾಧು ಕೋಕಿಲಾ, ರಂಗಾಯಣ ರಘು, ಜಹಾಂಗೀರ್, ಕುರಿ ಪ್ರತಾಪ್ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದಾರೆ. ಸಿನಿಮಾದಲ್ಲಿ ಒಂದಷ್ಟು ನ್ಯೂನ್ಯತೆಗಳಿದ್ದರೂ ವಲ್ಗಾರಿಟಿಗೆ ಅವಕಾಶ ಕೊಡದೆ, ಐಟಂ ಸಾಂಗ್ ತುರುಕದೇ ಒಂದೊಳ್ಳೆ ಫ್ಯಾಮಿಲಿ ಮನರಂಜನೆಯ ಸಿನಿಮಾ ಮಾಡಿದ್ದಾರೆ ನಿರ್ದೇಶಕರು. ಹಾಗಾಗಿ ಒಮ್ಮೆ ನೋಡಲು ಅಡ್ಡಿಯಿಲ್ಲ.

## ಜಾಹೀರಾತು:







ಮುಖ್ಯ ಸಂಪಾದಕರು–
ಕುಮಾರಸ್ವಾಮಿ.ಕೆ.ಎಸ್

ಪುಟವಿನ್ಯಾಸ–
ಕವನ ಬಿ.ಎನ್

ವರದಿಗಾರರು–
ಕವನ ಬಿ ಎನ್, ಕಿರಣ್ ಕುಮಾರ್ ಆರ್, ಕುಮಾರ್ ಹೆಚ್.ಪಿ, ಮಹೇಶ್ ವಿ, ಮೇಘನಾ ಎನ್